"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

(158ನೇ ಅಧಿವೇಶನ)

ಬುಧವಾರ, 28ನೇ ಜನವರಿ 2026

## ವಿಷಯಾನುಕ್ರಮಣಿಕೆ (INDEX)

**01. ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.**

- ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಐವನ್ ಡಿ'ಸೋಜಾ
- ಡಾ: ಯತೀಂದ್ರ ಎಸ್
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಸಿ.ಟಿ.ರವಿ
- ಶ್ರೀ ಎಂ.ಕೆ.ಪ್ರಾಣೇಶ್ (ಉಪ ಸಭಾಪತಿಯವರು)
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ಎ.ವಸಂತ್ ಕುಮಾರ್
- ಶ್ರೀ ಶಿವಕುಮಾರ್ ಕೆ.
- ಶ್ರೀ ರಮೇಶ್ ಬಾಬು
- ಶ್ರೀ ಕೆ.ಅಬ್ದುಲ್ ಜಬ್ಬರ್
- ಶ್ರೀ ಎಂ.ನಾಗರಾಜು

– – –

(50) 28/01/2026 10:50 ಎಸ್‌ಪಿಆರ್/ಕೆಎಸ್

# ಕರ್ನಾಟಕ ವಿಧಾನ ಪರಿಷತ್ತು

ಬುಧವಾರ, 28 ನೇ ಜನವರಿ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ
ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ 10 ಗಂಟೆ 54 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು
ಪೀಠದಲ್ಲಿ ಉಪಸ್ಥಿತರಿದ್ದರು

**(ಸದನ ಪ್ರಾರಂಭವಾಗುತ್ತಿದ್ದಂತೆ, ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ ಮತ್ತು ಸದಸ್ಯರುಗಳಾದ ಶ್ರೀ ಎಸ್.ಎಲ್.ಭೋಜೇಗೌಡ ಮತ್ತು ಶ್ರೀ ಸೂರಜ್ ರೇವಣ್ಣ ರವರುಗಳನ್ನು ಹೊರತುಪಡಿಸಿ, ಬಿ.ಜೆ.ಪಿ. ಮತ್ತು ಜೆ.ಡಿ.(ಎಸ್) ಪಕ್ಷದ ಇನ್ನಿತರೆ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು)**

**ಸಭಾಪತಿಯವರು:–** ಒಂದು ನಿಮಿಷ, ನಾನು ಹೇಳುವುದುನ್ನು ಕೇಳಿ. ವಿರೋಧ ಪಕ್ಷದ ನಾಯಕರೇ, ಸದನದ ಬಾವಿಯಲ್ಲಿದ್ದುಕೊಂಡು ಕೂಗಾಡಿದರೆ, ನಾನು ಅವರನ್ನು ಸದನದಿಂದ ಹೊರಗಡೆ ಹಾಕುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಹಾಕಿ ಬಿಡಿ.

**ಸಭಾಪತಿಯವರು:–** ಇದೇನಿದು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಮ್ಮ ಬೇಡಿಕೆಗಳಿಗೆ ಬೆಲೆ ಇಲ್ಲವೆಂದು ಹೇಳಿದರೆ, ಹೊರಗಡೆ ಹಾಕಿ. ಅದನ್ನು ಮಾಡಿ.

**(ಗೊಂದಲ)**

**ಸಭಾಪತಿಯವರು:–** ಇದೇನು ಧರ್ಮಶಾಲೆಯೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಮ್ಮ ಬೇಡಿಕೆಗಳಿವೆ. ಇದನ್ನು ಫುಲ್‌ಫಿಲ್ ಮಾಡಬೇಕು. ಸರ್ಕಾರ ಈ ರೀತಿಯಾಗಿ ಮೊಂಡುತನ ಮಾಡಿದರೆ...,

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಶ್ರೀ ಕೇಶವ ಪ್ರಸಾದ್ ರವರೇ, ನಿಮಗೆ ethics ಇದೆಯೇ? ಎಂತಹ ಒಳ್ಳೆಯ ಸಂಸ್ಕಾರದಿಂದ ನೀವು ಬಂದಿದ್ದೀರಿ. ಸಂಸ್ಕಾರವನ್ನು ಬಿಟ್ಟು ಹೀಗೆ ಮಾಡಿದರೆ ಹೇಗೆ? **(ಗೊಂದಲ)** ನಾನು ಹೇಳುವುದನ್ನು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾವು ವಿರೋಧ ಪಕ್ಷದವರಾಗಿದ್ದು, ಆಡಳಿತ ಪಕ್ಷದವರನ್ನು condemn ಮಾಡುವುದು ಸಂಸ್ಕಾರ ಅಲ್ಲ ಎಂಬ ಪದವನ್ನು ತಾವು

ಹೇಳಿದರೆ, ದಯಮಾಡಿ ಕ್ಷಮಿಸಬೇಕು. ನಾವು ಸದನದ ಬಾವಿಯೊಳಗೆ ಸರ್ಕಾರದ ವಿರುದ್ಧವಾಗಿ ಧಿಕ್ಕಾರವನ್ನು ಕೂಗುವಂತಿಲ್ಲ ಹೇಳಿದರೆ...

(ಗೊಂದಲ)

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರೇ, ಇದನ್ನೆಲ್ಲಾ ಬಿಡಿ. ನಾನು ಹೇಳುವುದೇನೆಂದರೆ, ವಿರೋಧ ಪಕ್ಷದ ನಾಯಕರೇ ನಿಮಗೆ ಏನು ಆಗಬೇಕು ಅದನ್ನು ಹೇಳಿ. ಈಗ ಯಾರೂ ಮಾತನಾಡಬೇಡಿ.

**01. ಘನತೆವೆತ್ತ ರಾಜ್ಯಪಾಲರು ಜಂಟಿ ಅಧಿವೇಶನನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು ಮುಂದುವರೆದ ಚರ್ಚೆ.**

.......

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಮ್ಮ ಬೇಡಿಕೆ ಇರುವುದು ಏನೆಂದರೆ, ಅಬಕಾರಿ ಸಚಿವರು ರಾಜಿನಾಮೆ ಕೊಡಬೇಕು. ಮಾನ್ಯ ರಾಜ್ಯಪಾಲರು ಭಾಷಣ ಮಾಡಿಲ್ಲ; ಅದನ್ನು ಓದಿಲ್ಲ ಎಂಬುದಾಗಿ ಒಂದು ಕಡೆ ಸರ್ಕಾರವೇ ಹೇಳಿದೆ. ಅದಕ್ಕೆ ಅವರು ಧಿಕ್ಕಾರವನ್ನೂ ಹಾಕಿದ್ದಾರೆ. ಅವರು ಒಂದು ಸಾರಿ **[XXX]** ಮಾಡಿದ ಮೇಲೆ, ವಂದನೆಯನ್ನು ಹೇಗೆ ಸ್ವೀಕಾರ ಮಾಡುವುದು? **[XXX]** ಮಾಡಿದರೆ, **[XXX]** ನಿರ್ಣಯವಾಗಬೇಕು. ಇಲ್ಲವೆಂದಾದರೆ, ಅದು ವಂದನಾ ನಿರ್ಣಯವಾಗಬೇಕು. ಇದು **[XXX]**ಯೋ ಅಥವಾ ವಂದನೆಯೋ ಎನ್ನುವ ಬಗ್ಗೆ ನಿಮ್ಮ ತೀರ್ಮಾನವನ್ನು ಮೊದಲು ಕೊಡಿ. ಇದಾದ ಮೇಲೆ ನಾವು ಪ್ರಾರಂಭ ಮಾಡೋಣ. ಇದು ನಮ್ಮ ಬೇಡಿಕೆಯಾಗಿದೆ.

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇಲ್ಲಿ ಎರಡು ವಿಚಾರಗಳನ್ನಿಟ್ಟುಕೊಂಡು ಅವರೇ confuse ಆಗಿದ್ದಾರೆ. ಅಬಕಾರಿ ಸಚಿವರಾದ ಶ್ರೀ ಆರ್.ಬಿ.ತಿಮ್ಮಾಪೂರರವರಿಗೆ ಸಂಬಂಧಿಸಿದ ವಿಷಯದ ಬಗ್ಗೆ ಚರ್ಚೆ ಮಾಡಬೇಕು ಎಂಬುದಾಗಿ ಅವರು ಹೇಳುತ್ತಿದ್ದಾರೆ. ಆದರೆ, ಸಚಿವರು ಉತ್ತರವನ್ನು ನೀಡುವುದಕ್ಕೆ ಇವರು ಬಿಡಲಿಲ್ಲ. ಸದನದಲ್ಲಿ ರಾಜ್ಯಪಾಲರ ಭಾಷಣದ ಪ್ರತಿಯನ್ನು ಮಂಡನೆ ಮಾಡಿದ್ದನ್ನು ಸಭಾನಾಯಕರು ಹೇಳಲೇ ಇಲ್ಲ. ಇದು ದಾಖಲೆಯಾಗಿದ್ದು, ಇದನ್ನು ತಾವೂ ಸಹ ನೋಡಿದ್ದೀರಿ. ಚರ್ಚೆಗೆ ಈಗಾಗಲೇ ಅವಕಾಶ ಮಾಡಿ ಕೊಟ್ಟಿದ್ದು, ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ರಾಜ್ಯಪಾಲರ ಭಾಷಣದ ಸಂಬಂಧಿಸಿದ ವಂದನಾರ್ಪಣಾ ಮೇಲೆ ಭಾಷಣವನ್ನು ಶುರು ಮಾಡಿದ್ದಾರೆ. ಆ ಸಂದರ್ಭದಲ್ಲಿ ಇವರು ಎರಡೂ ಅಂಶಗಳನ್ನು ಮಿಕ್ಸ್ ಮಾಡಿದ್ದಾರೆ. ದಯಮಾಡಿ ವಿರೋಧ ಪಕ್ಷದವರು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕು. ಈಗ ಪ್ರಶ್ನೋತ್ತರ ಕಲಾಪವನ್ನು ಮಾಡಿ..., ಇಲ್ಲಿ ಎರಡು ವಿಚಾರಗಳಿದ್ದು, ಆ ಪೈಕಿ ಒಂದು ಈಗಾಗಲೇ ಪ್ರಾರಂಭವಾಗಿದೆ. ನಿನ್ನೆಯ ದಿನ ಸಾಯಂಕಾಲ ಅಬಕಾರಿ ಸಚಿವರು ಸದನದಲ್ಲಿ ಬಂದು ಕುಳಿತಿದ್ದರು.

ಅವರಿಗೆ ಉತ್ತರಿಸಲು ಇವರುಗಳು ಅವಕಾಶವನ್ನು ನೀಡಲಿಲ್ಲ. ಇದು ಸರಿಯಾದುದಲ್ಲ. ಈಗ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡುವಂತೆ ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ನಾನು ಮೊದಲಾಗೆ ಪ್ರಸ್ತಾಪ ಮಾಡಿದ್ದೆ. ನಿನ್ನೆಯ ದಿನ ಉಪ ಸಭಾಪತಿಯವರು ಪೀಠದಲ್ಲಿದ್ದು, ತಾವು ಉಪಸ್ಥಿತರಿರಲಿಲ್ಲ. ಈಗ ಮತ್ತೊಮ್ಮೆ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ತಾವು ಇದನ್ನು lay ಮಾಡಿದ್ದೇವೆ ಎಂದು ಹೇಳಿದ ಮರು ಘಳಿಗೆಯಲ್ಲಿಯೇ "ನಮ್ಮ ಸಭಾನಾಯಕರು ಇದನ್ನು ವಿರೋಧ ಮಾಡಿದ್ದಾರೆ" ಎಂದು ನಾನು ಪ್ರಸ್ತಾಪ ಮಾಡಿದೆ. ಸಭಾನಾಯಕರು ಮಾತನಾಡುವಾಗ ಇಂತಿಂತಹ ವಿಚಾರಗಳನ್ನು ಹೇಳಿದ್ದಾರೆ. ಆದ್ದರಿಂದ ಇದನ್ನು lay ಮಾಡಿದ್ದೇವೆ ಎಂದು ಹೇಳುವುದು ತಪ್ಪಾಗುತ್ತದೆ. ಇದನ್ನು lay ಮಾಡಿದ ಮೇಲೆ, ಅವರು ಅದನ್ನು ಒಪ್ಪಿದ್ದೇವೆ ಎಂದು ಹೇಳಿದರೆ, ನೀವು ಅಲ್ಲಿ ಸೂಚಿಸುವುದಕ್ಕೆ ಅವಕಾಶವನ್ನು ಕೊಡಬಹುದು. ಆಮೇಲೆ, ಅನುಮೋದನೆಗೆ ಅವಕಾಶವನ್ನು ಕೊಡಬಹುದು. ಆದರೆ, ಇಲ್ಲಿ ಸಭಾನಾಯಕರೇ ಈ ರೀತಿಯಾಗಿ ಹೇಳಿದ್ದಾರೆ. ಮತ್ತೆ ಇವತ್ತೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ಗೌರವಾನ್ವಿತ ಸದಸ್ಯರು "ರಾಜ್ಯಪಾಲರ ಭಾಷಣವನ್ನು ನಾವು ಧಿಕ್ಕರಿಸಿದ್ದೇವೆ; ರಾಜ್ಯಪಾಲರು ಪೂರ್ಣ ಪ್ರಮಾಣದ ಭಾಷಣವನ್ನು ಮಾಡಿಲ್ಲ" ಎಂಬುದಾಗಿ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ನೀಡಿದ್ದಾರೆ. ದಯಮಾಡಿ ಒಂದು ಸೆಕೆಂಡ್ ಇಲ್ಲಿ ನೋಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ದಿನಪತ್ರಿಕೆಯನ್ನು ಸದನದಲ್ಲಿ ಪ್ರದರ್ಶಿಸಿದರು)**

ಒಂದು ಕಡೆ ಆ ನಿರ್ಣಯಗಳು ಇರಲಿ. ನಾವು ರಾಜ್ಯಪಾಲರ ಭಾಷಣವನ್ನು ಒಪ್ಪಿದ್ದೇವೆ; ಅವರು ಪೂರ್ಣವಾಗಿ ಓದಿದ್ದಾರೆ ಎಂಬುದಾಗಿಯೂ ಸಹ ನಾವು ಹೇಳುತ್ತೇವೆ. ಆದರೆ ಇಲ್ಲಿ ನೀವು lay ಮಾಡಿದ ನಂತರ, ಸಭಾನಾಯಕರು ಹೇಳಿದ ಮಾತನ್ನು ನೋಡಬೇಕು. ಶ್ರೀ ಎನ್.ಎಸ್. ಬೋಸರಾಜು ರವರು ಮಾತನಾಡುವಾಗ, "ಸನ್ಮಾನ್ಯ ಸಭಾಪತಿಯವರೆ, ಘನತೆವೆತ್ತ ರಾಜ್ಯಪಾಲರು ಇವತ್ತು ವಿಧಾನ ಮಂಡಲದಲ್ಲಿ ನಡೆದುಕೊಂಡ ರೀತಿಯನ್ನು ನಾವು ಖಂಡಿಸುತ್ತಿದ್ದೇವೆ. ಅವರು ಸಂವಿಧಾನದ ಅನುಚ್ಛೇದ 163 ಮತ್ತು 176 ರ ವಿರುದ್ಧವಾಗಿ ನಡೆದುಕೊಂಡಿದ್ದಾರೆ. **(ಮುಂದು)**

(051) 28.01.2026 ಬಿಕೆಪಿ-ಕೆಎಸ್ 11.00 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಇಡೀ ಕರ್ನಾಟಕದ ಜನತೆಗೆ ಮತ್ತು ವಿಧಾನಮಂಡಲಕ್ಕೆ ಅಗೌರವವನ್ನು ತೋರಿಸಿದ್ದಾರೆ. ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ, ಕೇಂದ್ರ ಸರ್ಕಾರದ ಕೈಗೊಂಬೆಯಂತೆ ನಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ಅವರು ಪದೇ ಪದೇ ಹೇಳುತ್ತಿದ್ದಾರೆ. ನಾನೂ ಈಗಲೂ ಹೇಳುವುದೇನೆಂದರೆ, I will stand by my statement. ಅವರು ಸಂವಿಧಾನದ ಅನುಚ್ಛೇದ 163 ಮತ್ತು ಅನುಚ್ಛೇದ 176 ಅನ್ನು mislead ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಉತ್ತರ ನೀಡುವಾಗ justification ಕೊಡಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎನ್.ಎಸ್.ಬೋಸರಾಜುರವರೇ, ಮಾನ್ಯ ಎಸ್.ಎಲ್.ಭೋಜೇಗೌಡರವರು ಮೊದಲು ಸಂಪೂರ್ಣವಾಗಿ ಮಾತನಾಡಲಿ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ನಡೆದುಕೊಂಡ ರೀತಿಯನ್ನು ನಾನು ಖಂಡಿಸುತ್ತೇನೆ. ಸಂವಿಧಾನದ ಅನುಚ್ಛೇದ 163 ಮತ್ತು 176 ರ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇಡೀ ಕರ್ನಾಟಕದ ಜನತೆಗೆ ಮತ್ತು ವಿಧಾನಮಂಡಲಕ್ಕೆ ಅಗೌರವ ತೋರಿಸಿದ್ದಾರೆ, ಅದನ್ನು ನಾವು ಪ್ರತಿಭಟಿಸುತ್ತೇವೆ. ಅವರು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ನಡೆದುಕೊಂಡಿದ್ದಾರೆ.

**ಸಭಾಪತಿಯವರು:–** ಈಗ ನಾನು ಹೇಳುವುದೇನೆಂದರೆ, ನಿನ್ನೆ ದಿವಸ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದು, ನಾನು ಸಹ ಅದರ ಬಗ್ಗೆ ಕಛೇರಿಯಲ್ಲಿ ಕುಳಿತುಕೊಂಡು ದೃಶ್ಯ ಮಾಧ್ಯಮದ ಮೂಲಕ ವೀಕ್ಷಣೆ ಮಾಡಿದ್ದೇನೆ. ಇದೆಲ್ಲವೂ ನಡೆದ ತರುವಾಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚಿಸಲು ಪೀಠದಲ್ಲಿ ಮಾನ್ಯ ಉಪ ಸಭಾಪತಿಯವರು ಇದ್ದಂತಹ ಸಂದರ್ಭದಲ್ಲಿ ಮಾನ್ಯ ಐವನ್ ಡಿ'ಸೋಜಾರವರು ವಂದನಾ ನಿರ್ಣಯದ ಪ್ರಸ್ತಾವವನ್ನು ಮಂಡಿಸಿದ್ದು, ಅವರಿಗೆ ಮಾತನಾಡಲು ಅವಕಾಶ ನೀಡಿದ್ದೇನೆ, ಅದರಂತೆ ಅವರು ಮಾತನಾಡಬೇಕು. ಜೊತೆಗೆ ಸದನ ಕರೆದಿರುವ ಉದ್ದೇಶವೇನೆಂದರೆ, ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಸಂಬಂಧಿಸಿದಂತೆ ಮಾತನಾಡುವ ಸಲುವಾಗಿಯೇ ಸದನ ಕರೆಯಲಾಗಿದೆ. ಒಂದು ವಿಷಯವನ್ನು ನಾನು ಮೊನ್ನೆಯೇ ಹೇಳಬಹುದಾಗಿತ್ತು. ಅದರಂತೆ ವಂದನಾ ನಿರ್ಣಯವು ಮಂಡನೆಯಾಗಬೇಕಾಗಿತ್ತು. ನಾನು ರಾಜ್ಯಪಾಲರ ವಿಚಾರವಾಗಿಯಾಗಲೀ ಅಥವಾ ಬೇರೆ ವಿಚಾರವಾಗಲೀ ಹೇಗೆ ಮಾತನಾಡಬೇಕೆಂಬುದನ್ನು ನಾನು ಓದಿ ತಿಳಿಸುತ್ತೇನೆ. ಏಕೆಂದರೆ, ಎರಡೂ ಕಡೆಯಿಂದ ಗಲಾಟೆಯಾಗಿದೆ. ಅದಲ್ಲದೇ ಸಮಯದ ಅಭಾವದಿಂದಾಗಿ ಸದನವನ್ನು ಮುಂದೂಡುವಂಥ ಪ್ರಸಂಗ ಉದ್ಭವಿಸಿತ್ತು.

ದಿನಾಂಕ: 22.01.2026 ರಂದು ಬೆಳಗ್ಗೆ 11:00 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಮೊದಲನೆ ಮಹಡಿಯಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ವಿಧಾನಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿ, 'ಜೈ ಹಿಂದ್, ಜೈ ಕರ್ನಾಟಕ' ಎಂದು ರಾಜ್ಯಪಾಲರು ಭಾಷಣ ಮುಗಿಸಿದ ನಂತರ

ರಾಷ್ಟ್ರಗೀತೆ ನುಡಿಸಲು ಅವಕಾಶ ನೀಡದೆ, ನಿರ್ಗಮಿಸಿರುವ ನಡೆಯ ಬಗ್ಗೆ ಚರ್ಚಿಸಲು ಅನುಮತಿಸಬೇಕೆಂದು ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಇತರೆ ಸದಸ್ಯರು ಮನವಿ ಸಲ್ಲಿಸಿರುತ್ತಾರೆ.

ಮುಂದುವರೆದು, ಸದರಿ ಜಂಟಿ ಅಧಿವೇಶನವನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿ, 'ಜೈ ಹಿಂದ್, ಜೈ ಕರ್ನಾಟಕ' ಎಂದು ಭಾಷಣವನ್ನು ಮುಕ್ತಾಯಗೊಳಿಸಿ, ಸದನದಿಂದ ನಿರ್ಗಮಿಸುವಾಗ ಘಟಿಸಿದ ಘಟನೆಗೆ ಸಂಬಂಧಿಸಿದಂತೆ, ಸೂಕ್ತ ಕ್ರಮವಹಿಸಲು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಮನವಿ ಸಲ್ಲಿಸಿರುತ್ತಾರೆ. ಮೇಲಿನ ಎರಡೂ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮತ್ತು ಭಾರತ ಸಂವಿಧಾನದ ಅನುಚ್ಛೇದ 208 (1)ರ ಮೇರೆಗೆ ರಚಿಸಲಾಗಿರುವ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು ಪರಿಮಿತಿಯಲ್ಲಿ ಗಮನಿಸಿರುವ ಅಂಶಗಳ ಬಗ್ಗೆ ಈ ಸದನದಲ್ಲಿ ಬೆಳಕು ಚೆಲ್ಲಲು ಬಯಸುತ್ತೇನೆ. ಮೊದಲನೆಯದಾಗಿ, ದೇಶದಲ್ಲಿಯೇ ಶತಮಾನದ ಇತಿಹಾಸ ಹೊಂದಿ, ಚಿಂತಕರ ಛಾವಡಿ ಎಂದು ಹೆಸರುವಾಸಿಯೊಂದಿಗೆ ನಮ್ಮ ರಾಜ್ಯದ ವಿಧಾನ ಪರಿಷತ್ತು ತನ್ನದೇ ಆದ್ದಂತಹ ಹಿರಿಮೆ-ಗರಿಮೆ ಹೊಂದಿರುವುದು ಈ ಸದನದಲ್ಲಿ ಹಾಜರಿರುವ ನಮ್ಮೆಲ್ಲರ ಶಾಸಕ ಮಿತ್ರರಿಗೆ ತಿಳಿದಿರುವ ವಿಷಯವಾಗಿದ್ದು, ಅಂತಹ ಇತಿಹಾಸವುಳ್ಳ ಈ ಮೇಲ್ಮನೆಯಲ್ಲಿ ನಾವುಗಳು ಸಾರ್ವಜನಿಕರ ಪರವಾಗಿ ಅವರ ಧ್ವನಿಯಾಗಿ ಸದನದ ಮೂಲಕ ಬೆಳಕು ಚೆಲ್ಲುವಂತಹ ಗುರುತರವಾದ ಜವಾಬ್ದಾರಿ ಹೊಂದಿರುತ್ತಾರೆ ಎಂದು ಪುನರ್ ಉಚ್ಛರಿಸುತ್ತಾ, ಈ ಸದನದ ಸದಸ್ಯರು ಸದನದಲ್ಲಿ ಪ್ರಸ್ತಾಪಿಸಿರುವ ವಿಚಾರದ ಪ್ರತಿಯೊಂದು ಅಂಶಗಳನ್ನು ನಾಡಿನ ಜನತೆ ಸೂಕ್ಷ್ಮವಾಗಿ ಗಮನಿಸುತ್ತಿರುವುದರಿಂದ ನಮ್ಮೆಲ್ಲರ ವಿಚಾರದ ಬಗ್ಗೆ ಸಂವೇದನಾಶೀಲರಾಗಿ ಆತ್ಮಾವಲೋಕನಾ ಮಾಡಿಕೊಳ್ಳುವ ಮೂಲಕ ಈ ಸದನದ ಗೌರವವನ್ನು ಪ್ರತಿ ಹಂತದಲ್ಲಿಯೂ ನಾವೆಲ್ಲರೂ ಸಹ ಎತ್ತಿಹಿಡಿಯಬೇಕಾಗಿರುವುದು ನಮ್ಮ ಮತ್ತು ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂಬುದು ಅಂತರಾಳದ ಭಾವನೆಯಾಗಿದೆ.

ಮುಂದುವರೆದು, ನಾವೆಗಳೆಲ್ಲರೂ ಸಹ ಸದನದಲ್ಲಿ ಯಾವುದೇ ವಿಚಾರ ವಿನಿಯಮಯ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಸಂವಿಧಾನದ ಚೌಕಟ್ಟಿನಡಿಯಲ್ಲಿ ಬರುತ್ತೇವೆಯೇ ಅಥವಾ ಇಲ್ಲವೇ ಎನ್ನುವ ಅಂಶವನ್ನು ಗಮನದಲ್ಲಿರಿಸಿಕೊಳ್ಳುವುದು ಅತೀ ಮುಖ್ಯವಾಗುತ್ತದೆ. ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಎರಡೂ ಸದನಗಳ ರಕ್ಷಕರಾಗಿದ್ದು, ಮಾನ್ಯರ ಸೂಚನೆಯಂತೆ ಉಭಯ ಸದನಗಳ ಉಪ ನಿವೇಶನಗಳು ಜರುಗುವುದು ತಮ್ಮೆಲ್ಲರಿಗೂ ಸಹ ತಿಳಿದಿರುವ ವಿಷಯವಾಗಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮ 151ರ ಚರ್ಚೆಯ ವ್ಯಾಪ್ತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಿರುತ್ತದೆ.

***"ಒಂದು ನಿರ್ಣಯದ ಮೇಲಿನ ಚರ್ಚೆ ನಿರ್ಣಯಕ್ಕೆ ಸಂಬಂಧಿಸಿರಬೇಕು ಹಾಗೂ ಅದರ ವ್ಯಾಪ್ತಿಗೆ ಒಳಪಟ್ಟಿರಬೇಕು"***

ಅತೀ ಮುಖ್ಯವಾಗಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 306 ರಡಿಯಲ್ಲಿ ***'ಮಾತನಾಡುವಾಗ ಪಾಲಿಸಬೇಕಾದ ನಿಯಮಗಳ'*** ಬಗ್ಗೆ

ಉಲ್ಲೇಖಿಸಲಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 306 (6) ಮತ್ತು 306(10) ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ. ಅದೇನೆಂದರೆ;

***"...ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಕೆಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರು ಅಥವಾ ರಾಷ್ಟ್ರಾಧ್ಯಕ್ಷರನ್ನು ಬಳಸತಕ್ಕದ್ದಲ್ಲ...'***

ಈ ಹಿನ್ನೆಲೆಯಲ್ಲಿ ಸದನದ ಒಟ್ಟಾರೆ ಗೌರವಯುತವಾಗಿ ಶಾಸನದ ಪ್ರಕ್ರಿಯೆ ಮಾಡಿಕೊಳ್ಳುವ ದೃಷ್ಟಿಯಿಂದ ಯಾವುದೇ ನಿರ್ದಿಷ್ಟ ನಿಯಮಗಳನ್ನು ಉಲ್ಲೇಖಿಸಿರುವಂತೆ ಎರಡು ಮನೆಗಳು ದಿನಾಂಕ: 23.01.2026 ರಂದು ಸದರಿ ವಿಷಯದ ಬಗ್ಗೆ ನಾನು ನೀಡಿರುವ ತೀರ್ಪನ್ನು ಮರುಪರಿಶೀಲಿಸಿ ಮುಕ್ತಾಯಗೊಳಿಸಿರುತ್ತೇನೆ. ಎರಡೂ ಕಡೆಯವರಿಗೂ ತಿಳಿಸುವುದೇನೆಂದರೆ, ರಾಷ್ಟ್ರಪತಿ ಮತ್ತು ರಾಜ್ಯಪಾಲರ ಹೆಸರನ್ನು ತೆಗೆದುಕೊಳ್ಳಬಾರದು. ನಿಯಮದ ಮೇಲೆ ನಿರ್ಣಯವಾಗಿದೆ ಮತ್ತು ನಿರ್ದೇಶನವನ್ನು ನೀಡಿದ್ದೇನೆ. ರಾಷ್ಟ್ರಪತಿ ಮತ್ತು ರಾಜ್ಯಪಾಲರ ಹೆಸರನ್ನು ಈ ಸದನದ ಯಾವುದೇ ಸದಸ್ಯರು ಉಲ್ಲೇಖಿಸಲು ಅನುಮತಿಯನ್ನು ನಮ್ಮಲ್ಲಿ ನೀಡಿರುವುದಿಲ್ಲ. ಸದನವನ್ನುದ್ದೇಶಿಸಿ ರಾಜ್ಯಪಾಲರ ಬಗ್ಗೆ ಸದನವನನುದ್ದೇಶಿಸಿ ಮಾತನಾಡಬೇಕಾದರೆ ಮಾತನಾಡಬಹುದು. ಅದನ್ನು ಬಿಟ್ಟು ಟೀಕೆ ಮತ್ತು ಮತ್ತೊಂದನ್ನು ಮಾಡುವುದಾಗಲಿ ಮಾಡುವಂತಿಲ್ಲ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರು ರಾಜ್ಯಪಾಲರನ್ನು ಟೀಕೆಗೆ ನೀವು ಮತ್ತು ಅವರು ಅಂದರೆ ಯಾರೂ ಸಹ ಒಳಪಡಿಸಬಾರದು. ಆದಾಗ್ಯೂ ಒಳಪಡಿಸಿದಾದರೆ, ಅಂಥವರ ಮೇಲೆ ಶಿಸ್ತು ಕ್ರಮಕೈಗೊಳ್ಳಲಾಗುವುದು. ಅದಕ್ಕಾಗಿ ದಯವಿಟ್ಟು ರಾಜ್ಯಪಾಲರ ಹೆಸರನ್ನು ಬಳಸಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, with the permission of the Chair.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮೊದಲು ಮಾತನಾಡಲು ಪೀಠದ ಅನುಮತಿ ಕೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಆಗಬಹುದು. ತಾವು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ತಮ್ಮ ತೀರ್ಪನ್ನು ಓದಿ ಮತ್ತೊಮ್ಮೆ ನಮ್ಮೆಲ್ಲರಿಗೂ ಎಚ್ಚರಿಕೆ ನೀಡಿದ್ದು, ಬಹಳ ಸಂತೋಷ. ಬಹಳ ಗೌರವವಾಗಿರುವಂಥ ವಿಚಾರವನ್ನು ಸಭೆಯ ಮುಂದೆ ಮತ್ತೆ ಇಟ್ಟಿದ್ದೀರಿ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ನಾವ್ಯಾರು ಕೂಡ ಮಾತನಾಡಿಲ್ಲ. ತಾವು lay ಮಾಡಿದ ತಕ್ಷಣ ಮಾನ್ಯ ಸಭಾನಾಯಕರು ಮಾತನಾಡಿರುವಂಥ ವಿಚಾರದ ಬಗ್ಗೆ ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಅವರು ಏನು ಹೇಳುತ್ತಿದ್ದಾರೆಂದರೆ ಇಡೀ ರಾಜ್ಯದ ಜನತೆಗೆ ಅಗೌರವ ತೋರಿಸಿದ್ದಾರೆ. ಯಾವ ರೀತಿ ಅಗೌರವ ತೋರಿಸಿದ್ದಾರೆ ಎಂಬುದಕ್ಕೆ justification ಕೊಡಬೇಕು. ಜೊತೆಗೆ ಖಂಡಿಸುತ್ತಿದ್ದೇವೆ ಎಂದು ಹೇಳಿದ್ದು, ಏತಕ್ಕಾಗಿ

ಖಂಡಿಸುತ್ತಿದ್ದಾರೆ ಎಂಬುದನ್ನು ಹೇಳಬೇಕು. ಅದರ ತೀರ್ಮಾನವಾಗಲಿ ಎಂದು ತಾವು ಸೂಚನೆ/ಅನುಮೋದನೆ ನೀಡಿದರೆ, ಆನಂತರ justification ಸರಿಯಾದರೆ ನಾವು ಒಪ್ಪಿಕೊಳ್ಳುತ್ತೇವೆ. ತಾವೇ ಅದರ ಬಗ್ಗೆ ಮಾತನಾಡುವಂತಿಲ್ಲ ಎಂದು ಹೇಳಿದ್ದೀರಿ. ರಾಜ್ಯಪಾಲರ ಬಗ್ಗೆ ಮಾತನಾಡಿದ್ದಾರೆ. ಅದಲ್ಲದೇ ರಾಜ್ಯದ ಜನತೆಗೆ ಅವಮಾನ ಮಾಡಿದ್ದಾರೆ ಎಂದು ಹೇಳುತ್ತಾರೆ. ಯಾವ ರೀತಿ ಘನತೆವೆತ್ತ ರಾಜ್ಯಪಾಲರು ಅವಮಾನ ಮಾಡಿದ್ದಾರೆ ಎಂಬುದನ್ನು justification ಕೊಡಲಿ.

**ಶ್ರೀ ಶಿವಕುಮಾರ್ ಕೆ.:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರವರು ಎತ್ತಿ ಹಿಡಿದಿರುವಂಥ ಅಂಶಕ್ಕೆ ಸಂಬಂಧಿಸಿದಂತೆ ನಾನು 3 ಅಂಶಕ್ಕೆ ಸ್ಪಷ್ಟತೆಯನ್ನು ಕೊಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾವು ಸ್ಪಷ್ಟವಾಗಿ ಹೇಳಿದ್ದೇವೆ, ಘನತೆವೆತ್ತ ರಾಜ್ಯಪಾಲರು ರಾಷ್ಟ್ರಗೀತೆಗೆ ಅವಕಾಶ ನೀಡದೇ ಸದನದಿಂದ ನಿರ್ಗಮಿಸಿರುವುದನ್ನು ಪ್ರತಿಭಟಿಸುತ್ತೇವೆ ಎನ್ನುವಂಥ ಮಾತನ್ನು ನಾವು ಹೇಳಿದ್ದೇವೆ. ಜೊತೆಗೆ ಅಗೌರವ ತೋರಿಸಿದ್ದಾರೆ ಎಂದು ಹೇಳಿದ್ದೇವೆ. ಹಾಗಾಗಿ, ಸಂವಿಧಾನದ ಅನುಚ್ಛೇದ 163 ಮತ್ತು ಅನುಚ್ಛೇದ 176 ಅನ್ನು mention ಮಾಡಿದ್ದೇನೆ. ಹಿಂದೆ ವಿರೋಧ ಪಕ್ಷದವರೆಲ್ಲರೂ ಮಾತನಾಡಿದ್ದು ಹಾಗೂ ಎಲ್ಲವು ಸಹ ನನ್ನ ಬಳಿ ಇದೆ. (ದಾಖಲೆಯನ್ನು ತೋರಿಸುತ್ತಾ) ಹಿಂದೆ ರಾಜ್ಯಪಾಲರು ಬಂದಾಗ ವಿರೋಧ ಪಕ್ಷದವರು well ನಲ್ಲಿ ಬಂದು ಏನು ಮಾಡಿದರೂ ಎಂಬುದು ಇದರಲ್ಲಿ clear ಆಗಿದೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ಸಮಾವೇಶ ಮಾಡಿರುವಂತಹದ್ದು ಜಂಟಿ ಅಧಿವೇಶನದ ಮೂಲಕ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸುವುದು ಪ್ರಮುಖವಾಗಿರುವ ಅಂಶವಾಗಿದೆ. ಬಿ.ಜೆ.ಪಿ.ಯವರು ಅಥವಾ ವಿರೋಧ ಪಕ್ಷದವರು ಇವತ್ತು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಪರವಾಗಿ ಮಾತನಾಡಲು ಅವಕಾಶ ಕೊಡುವುದಿಲ್ಲ ಎಂದು ಹೇಳಿದರೆ, whether it amounts to honoring the Governor, ರಾಜ್ಯಪಾಲರನ್ನು ಗೌರವಿಸುತ್ತಾರೆಯೇ, ಇಲ್ಲವೋ ಎಂಬುದನ್ನು ಹೇಳಬೇಕು. ನಾನು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪ ಸಲ್ಲಿಸಿದ್ದು, ಅದರ ಮೇಲೆ ಮಾತನಾಡುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಡಲಿಲ್ಲವೆಂದರೆ, they are against the Governor's Speech. ಅವರು ರಾಜ್ಯಪಾಲರ ಭಾಷಣದ ವಿರುದ್ಧವಾಗಿದ್ದಾರೆಂದು ಅರ್ಥ

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಘನತೆವೆತ್ತ ರಾಜ್ಯಪಾಲರ ಭಾಷಣವನ್ನು ಒಪ್ಪಿದ್ದಾರೆಯೇ ಎಂಬುದನ್ನು ಹೇಳಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸಲು ಏತಕ್ಕೆ ಅವಕಾಶ ಕೊಡುವುದಿಲ್ಲ, ಅದರ ಉದ್ದೇಶವೇನು?

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಘನತೆವೆತ್ತ ರಾಜ್ಯಪಾಲರ ಭಾಷಣವನ್ನು ಒಪ್ಪಿದ್ದೇವೆ. ಅವರು ಒಪ್ಪಿದ್ದಾರೆಯೇ ಕೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ಪ್ರಸ್ತಾಪದ ಮೇಲೆ ಮಾತನಾಡಲು ನಮಗೆ ಅವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು:-** ಅವರಿಗೆ ಮಾತನಾಡಲು ಬಿಡುತ್ತೀರಾ, ಇಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಮಾತನಾಡಿದ ವಿಚಾರವಾಗಿ ಮಾತ್ರ ಹೇಳುವುದೇನೆಂದರೆ,...

**ಸಭಾಪತಿಯವರು:-** ಬಿಡಿ. ಅದೆಲ್ಲ ಏತಕ್ಕೆ ಮಾತನಾಡುವುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲವನ್ನು ಬಿಡುವುದಾದರೆ ನಾವು ಏತಕ್ಕೆ ಚರ್ಚೆ ಮಾಡಬೇಕು?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಿರ್ಣಯದ ಮೇಲೆ ಚರ್ಚೆಯಾದ ನಂತರ ಮಾನ್ಯ ಐವನ್ ಡಿ'ಸೋಜಾರವರು objection ಮಾಡಿದ ಮೇಲೆ ತಾವು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾಪ ಮಾಡಿದ್ದು, ತಾವು ಪೀಠದಲ್ಲಿ ಇದ್ದಾಗಲೇ ಮಾತನಾಡಲು ಅನುಮೋದನೆ ನೀಡಿದ್ದೀರಿ. ಅದನ್ನು ಮಾನ್ಯ ರಮೇಶ್‌ರವರು ಅನುಮೋದನೆ ಮಾಡಿದ್ದು, ಅದರಂತೆ ಮಾನ್ಯ ಐವನ್ ಡಿ'ಸೋಜಾರವರಿಗೆ ಮಾತನಾಡಲು ಅವಕಾಶ ಕಲ್ಪಿಸಿದ್ದೀರಿ. ಹಾಗೆಯೇ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದಾಗ ಮಾತನಾಡಲು ಅವಕಾಶ ನೀಡಿದ್ದು, ಅದು ಮುಂದುವರೆಯುತ್ತಿದೆ. ಹಾಗಾಗಿ, ಮೊದಲು ಅದನ್ನು complete ಮಾಡಬೇಕು. ರಾಜ್ಯಪಾಲರಿಗೆ ಅಗೌರವ ತೋರಿಸುತ್ತಿರುವುದು ವಿರೋಧ ಪಕ್ಷದವರೇ ಅಥವಾ ನಾವೇ?

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ಸಲುವಾಗಿ ಅಗೌರವ ತೋರಿಸುತ್ತಿರುವುದು ಆಡಳಿತ ಪಕ್ಷದವರೇ ಅಥವಾ ವಿರೋಧ ಪಕ್ಷದವರೇ ಎಂಬುದಕ್ಕೆ ತಾವು ದಯವಿಟ್ಟು ಮೊದಲು ಉತ್ತರ ನೀಡಿ. ಏಕಾಏಕಿ ನಮ್ಮ ಮೇಲೆ ಆಪಾದನೆ ಮಾಡುತ್ತಾರೆ ಅಲ್ಲವೇ? ರಾಜ್ಯಪಾಲರಿಗೆ ನಾವು ಗೌರವ ಕೊಡುತ್ತೇವೆ.

(ಗೊಂದಲ)

**ಸಭಾಪತಿಯವರು:-** ನೀವು ಏತಕ್ಕೆ ಮತ್ತೆ ಎದ್ದು ನಿಲ್ಲುತ್ತಿದ್ದೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೆ,...

**ಡಾ॥ ಯತಿಂದ್ರ.ಎಸ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ರವರು ಏನು ಹೇಳುತ್ತಿದ್ದಾರೆಂದರೆ ರಾಜ್ಯಪಾಲರ ಭಾಷಣವನ್ನು ನಾವು ಒಪ್ಪಿಕೊಳ್ಳುತ್ತೀರೋ ಬಿಡುತ್ತೀರೋ ಎಂದು ಕೇಳುತ್ತಿದ್ದಾರೆ. ನಮ್ಮ ರಾಜ್ಯ ಸರ್ಕಾರದ ರಾಜ್ಯಪಾಲರ ಭಾಷಣಕ್ಕಾಗಿಯೇ ನಾವು ವಂದನಾರ್ಪಣಾ ಪ್ರಸ್ತಾಪವನ್ನು ಮಂಡಿಸಿರುವುದಾಗಿದ್ದು, ಇಲ್ಲಿ ಇದನ್ನು ಒಪ್ಪಿಕೊಳ್ಳುವಂತಹ ಪ್ರಶ್ನೆ ಬರುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನೀವು ಓದಿರುವುದನ್ನು ನಾವು ಗೌರವಿಸಿದ್ದೇವೆ. ಎರಡೂ ಕಡೆಯಲ್ಲೂ ಸಮಜಾಯಿಷಿ ಕೊಡಬೇಕು, ಕೊಟ್ಟಿದ್ದೀರಿ. ನಮ್ಮ ಪ್ರಶ್ನೆ ಇರುವುದು ಏನು? ರಾಜ್ಯಪಾಲರ ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯ ಸ್ವೀಕರಿಸಬೇಕಾಗಿದ್ದು, ಅದಕ್ಕೆ ನಾವು ಯಾರಾದರೂ ವಿರೋಧ ಮಾಡಿದ್ದೇವೆಯೇ?

(ಮುಂದು)

(052) 28.01.2026 11.10 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸುವುದು. ಇದನ್ನು ನಾವು ಯಾರಾದರೂ ವಿರೋಧ ಮಾಡಿದ್ದೇವೆಯೇ? ಮಾಡಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ವಿರೋಧ ಮಾಡಿರುವವರು ಯಾರು? ಸರ್ಕಾರದವರು.

**Sri IVAN D'SOUZA:-** It amounts to... ನಿಮ್ಮ ನಡವಳಿಕೆಯು ಆ ರೀತಿಯಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಿಮ್ಮ amount ನಿಮ್ಮ ಹತ್ತಿರ ಇಟ್ಟುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮೊದಲು ಧಿಕ್ಕಾರ ಕೂಗಿದವರೇ ನೀವು.. ಮಾತನಾಡಲು ನಿಮಗೇನು ನೈತಿಕತೆ ಇದೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಡಿ'ಸೋಜ ಅವರೆ, common sense ಇದೆಯೋ ಇಲ್ಲವೋ? ಏಕೆ ನಡುವೆ ಎದ್ದು ಮಾತನಾಡುತ್ತೀರಿ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನೀವು ವಿರೋಧ ಮಾಡಿದಿರಿ. **[XXX]** ಮಾಡಿದವರೂ ನೀವೇ, ವಂದನೆ ಮಾಡುವವರೂ ನೀವೇ ಆಗಬಾರದು. ಎರಡೂ ಒಟ್ಟೊಟ್ಟಿಗೆ ಹೋಗಬಾರದು. ನಿಮ್ಮದು **[XXX]**ಯೇ ಅಥವಾ ವಂದನೆಯೇ.. ಅದನ್ನು ತೀರ್ಮಾನ ಕೊಡಿ. ಇದು ನಮ್ಮ ಪ್ರಶ್ನೆಯಾಗಿತ್ತು. ಈಗ ಮಾನ್ಯ ಸದಸ್ಯರು ನಾವು ವಂದನಾ ನಿರ್ಣಯ ಮಂಡಿಸುತ್ತಿದ್ದೇವೆ, ನೀವು ವಿರೋಧ ಮಾಡಿ ಅವರಿಗೆ ಅಪಮಾನ ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ನಾವು ಮಾಡುವುದಿಲ್ಲ, ಇದು ಅಪಮಾನ ಅಲ್ಲ. ನಮಗೆ ಸ್ಪಷ್ಟನೆ ಬೇಕಾಗಿದೆ. ನಿಮ್ಮದು ವಂದನೆಯೇ ಅಥವಾ **[XXX]**ಯೇ? ಈ ಪ್ರಶ್ನೆಗೆ ಅವರು ಇದುವರೆಗೂ ಉತ್ತರ ಕೊಡುತ್ತಿಲ್ಲ ಮಾನ್ಯ ಸಭಾಪತಿಯವರೆ. ನಮಗೆ ಬೇಕಾಗಿರುವುದು ಸ್ಪಷ್ಟನೆ.

ಇನ್ನೊಂದು ವಿಷಯವೆಂದರೆ ನಾವು ಬಹಳ ಗೌರವ ಕೊಟ್ಟಿದ್ದೇವೆಂದು ಹೇಳಿದರು. ರಾಜ್ಯಪಾಲರಿಗೆ ಅಡ್ಡನಿಂತು attack ಮಾಡಿದ್ದು, ಅಗೌರವ ತೋರಿಸಿದ್ದು ಇದು....

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವು ಅವರು ಹೇಳಿರುವಂಥ ವಿಷಯದ ಬಗ್ಗೆ, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಆ ರೀತಿ ನಡೆದುಕೊಂಡಿರುವುದರ ಬಗ್ಗೆ ತಾವು ಈಗಾಗಲೇ ರೂಲಿಂಗ್ ಕೊಟ್ಟು ಅದನ್ನು ನೀತಿ ನಿರೂಪಣಾ ಸಮಿತಿಗೆ ವಹಿಸುತ್ತೇವೆಂದು ಹೇಳಿದ್ದೀರಿ. ಒಂದು ಬಾರಿ ರೂಲಿಂಗ್ ಆದ ಮೇಲೆ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ತಾವು ಈಗಾಗಲೇ refer ಮಾಡಿದ್ದೀರಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಏನೆಂದು ಮಾಡಿದ್ದಾರೆ?

**ಸಭಾಪತಿಯವರು:-** ನಾನು ಓದಿದೆನಲ್ಲ ಆಗಲೇ, ಅದನ್ನು ಹೇಳುತ್ತಿದ್ದಾರೆ ಬಿಡಿ.

**(ಗೊಂದಲ)**

**ಸಭಾಪತಿಯವರು:-** ಸಾಕು ಬಿಡಿ. ರಾಜ್ಯಪಾಲರ ಭಾಷಣದ ಪ್ರತಿಯನ್ನು ಎಲ್ಲರಿಗೂ distribute ಮಾಡುವುದಕ್ಕೆ ಕಾರ್ಯದರ್ಶಿಯವರಿಗೆ ಹೇಳಿದೆ. ನಂತರ ಅದನ್ನು ಎಲ್ಲರಿಗೂ ವಿತರಿಸಲಾಯಿತು. 'Read and Recorded' ಎಂದರೆ ಎಲ್ಲವನ್ನೂ ಓದಿದಂತೆ ಎಂದು ನಾನು ಹೇಳಿದ್ದೇನೆ. ಸಂಪೂರ್ಣವಾಗಿ ಅದನ್ನು ರಾಜ್ಯಪಾಲರು ಓದಿದಂತೆ ಅರ್ಥ. ಮೊದಲನೆ ಪ್ಯಾರಾ ಆಗಿರಲಿ ಅಥವಾ ಕೊನೆಯ ಪ್ಯಾರಾ ಆಗಿರಲಿ, ಅದು 'Read and Recorded' ಎನ್ನುವ ತೀರ್ಮಾನವನ್ನು ನಾನು ಕೊಟ್ಟಿದ್ದೇನೆ. ಓದಿದ್ದಾರೆ ಮತ್ತು ಅದರ ಮೇಲೆಯೂ ಚರ್ಚೆ ಮುಂದುವರೆದಿದೆ. ನಿನ್ನೆ ನಾನು ಮಾನ್ಯ ಐವನ್ ಡಿ'ಸೋಜ ಅವರನ್ನು ಕರೆದು ಅದರ ಬಗ್ಗೆ ವಂದನಾ ನಿರ್ಣಯ ಪ್ರಸ್ತಾವವನ್ನು move ಮಾಡುವುದಕ್ಕೆ ಹೇಳಿದ್ದೇನೆ. ಇಲ್ಲಿ ಸಮಸ್ಯೆ ಏನಾಗಿದೆಯೆಂದರೆ, ಮಾನ್ಯ ಸಭಾನಾಯಕರೆ, ಅವರು ನಿಮ್ಮ ಹೇಳಿಕೆಯ ಬಗ್ಗೆ ಕೇಳುತ್ತಿದ್ದಾರೆ. ಒಂದು ಸ್ಪಷ್ಟವಾದಂಥ ಅಭಿಪ್ರಾಯವನ್ನು ಹೇಳಿಬಿಡಿ.

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ್ದೇನೆ. ಅಲ್ಲಿ ರಾಷ್ಟ್ರಗೀತೆಗೆ ಅವಮಾನವಾಗಿದೆ. ರಾಷ್ಟ್ರಗೀತೆಗೆ ಗೌರವ ಸೂಚಿಸದೆ ರಾಜ್ಯಪಾಲರು

ಹೊರನಡೆಯುವ ಮೂಲಕ ಸಂವಿಧಾನದ ಅನುಚ್ಛೇದ 176 ಹಾಗೂ 163ಗೆ against ಆಗಿ ನಡೆದುಕೊಂಡಿದ್ದಾರೆ ಎಂದು ನನ್ನ ಅಭಿಪ್ರಾಯವನ್ನು ನಾನು ತಿಳಿಸಿದ್ದೇನೆ. ಅದರಲ್ಲಿ ನಮ್ಮದೇನೂ ತಪ್ಪಿಲ್ಲ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವರು propose ಮಾಡಿ second ಮಾಡಿದ್ದಾರೆ. ಈಗ ಪುನಃ ಏಕೆ ಹಿಂದಕ್ಕೆ ಹೋಗಬೇಕು? ವಿರೋಧ ಪಕ್ಷದವರು ನಿಮ್ಮ ತೀರ್ಮಾನಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆಯೇ? ಈಗಾಗಲೇ ಮಾನ್ಯ ಸಭಾನಾಯಕರು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮ್ಮ ಆದೇಶಕ್ಕೆ ವಿರೋಧ ಇಲ್ಲ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸಭಾನಾಯಕರು clarify ಮಾಡಿದ್ದಾರೆ. ಮಂಡನೆ ಮಾಡಿದ್ದಾರೆ ಎಂದು ಯಾವುದೇ ದಾಖಲೆಯಲ್ಲಿ ಇಲ್ಲ. ಇಲ್ಲಿ ಎಲ್ಲಿ ಹೇಳಿದ್ದಾರೆ ಮಂಡನೆ ಮಾಡಿರುವುದಿಲ್ಲ ಎಂದು.

**ಶ್ರೀ ಎನ್. ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೆ, ನಾವು ಏನು ಮಾತನಾಡಿದ್ದೇವೆಂದು ಎಲ್ಲಿ ಬೇಕಾದರೂ ದಾಖಲೆಯನ್ನು ತೆಗೆಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಕಾನೂನು ಸಚಿವರು ಇಲ್ಲಿಯೇ ಕುಳಿತಿದ್ದರು. ಅವರೂ ಕೂಡ ರಾಜ್ಯಪಾಲರು "ಓಡಿ ಹೋದರು" ಎಂದು ಹೇಳಿದ್ದರು. ಆಗ ನಾವು ಸ್ಪಷ್ಟ ಪಡಿಸಿದ್ದೇವೆ. ನಾವು ಎಲ್ಲಿಯೂ ಈ ವಿಚಾರವನ್ನು ವಿರೋಧ ಮಾಡಿಲ್ಲ. ತಾವು ಹೇಳಿದಿರಿ. ರೂಲ್‌ಬುಕ್‌ನಲ್ಲಿ ಈ ರೀತಿಯಿದೆ. ಮೊದಲನೆಯ ಸಾಲು ಮತ್ತು ಕೊನೆಯ ಸಾಲುಗಳನ್ನು ಹೇಳಿದ ಮೇಲೆ 'it is read' ಎಂದು ನಾವು ಬರೆದುಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಅದೇ ಮಾತನ್ನು ಹೇಳಿದ್ದಾರೆ. ಆದರೆ ಕಾನೂನು ಸಚಿವರು, ಸಭಾನಾಯಕರು ಆ ಮಾತುಗಳನ್ನು ಹೇಳಲಿಲ್ಲ. ಆದ್ದರಿಂದ ಈ ರೀತಿಯ ದ್ವಂದ್ವ ಹುಟ್ಟಿಕೊಂಡಿದೆ. ಈ ದ್ವಂದ್ವಕ್ಕೆ ಸ್ಪಷ್ಟನೆ ಬೇಕು. **[XXX]**ಯೇ ಅಥವಾ ವಂದನೆಯೇ? ಇದನ್ನು ಹೇಳಿದ ಮೇಲೆ ನಾವು ನಿಮ್ಮ ತೀರ್ಮಾನದಂತೆ ನಡೆದುಕೊಳ್ಳುತ್ತೇವೆ. ನಮ್ಮದೇನೂ ಅಭ್ಯಂತರವಿಲ್ಲ.

**ಶ್ರೀ ಎನ್. ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೆ, ನಾನು ಅವರ ಮಂಡನೆಯ ವಿಷಯದ ಬಗ್ಗೆ ಮಾತನಾಡುವುದಿಲ್ಲ. ರಾಷ್ಟ್ರಗೀತೆಯ ವಿಷಯ ಬಂದಿದೆ. ರಾಷ್ಟ್ರಗೀತೆಗೆ ಗೌರವ ಸೂಚಿಸದೆ ಅವರು ಹೊರಗೆ ಹೋಗಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಹಾಗಾದರೆ warn ಮಾಡಲಿಕ್ಕೆ ಕಾರಣವೇನು? ಧಿಕ್ಕಾರ ಕೂಗಲಿಕ್ಕೆ ಕಾರಣವೇನು?

**ಸಭಾಪತಿಯವರು:–** ಇದೆಲ್ಲವನ್ನೂ ನಾನು ಕೇಳಿದ್ದೇನೆ. ಎರಡೂ ಕಡೆಯವರು ಮಾತನಾಡುವುದನ್ನು ಕೇಳಿದ್ದೇನೆ. "ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಕೆಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ." ಇಷ್ಟು ಹೊತ್ತಿನವರೆಗೆ ಹೇಳಿದ್ದೆಲ್ಲಾ ಇಲ್ಲಿಗೆ ಮುಕ್ತಾಯ. ಯಾರೇ ಮಾತನಾಡಿದರೂ ಅದು ಮುಕ್ತಾಯವಾದಂತೆ. ಏಕೆಂದರೆ ರಾಜ್ಯಪಾಲರ ಬಗ್ಗೆ ಯಾರೂ ಮಾತನಾಡುವ ಅವಶ್ಯಕತೆ ಇಲ್ಲ.

**ಶ್ರೀ ಎಸ್. ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆ ಎಂದು ಅವರು ಹೇಳಿದರು.

(ಗೊಂದಲ)

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಅವರಿಗೆ explanation ಕೊಡುವುದಕ್ಕೆ ಅವಕಾಶ ಕೊಟ್ಟ ಹಾಗೆ ನಮಗೂ ಅವಕಾಶ ಕೊಡಿ. ರಾಷ್ಟ್ರಗೀತೆಗೆ ಅಪಮಾನವಾಗಿದೆ ಎಂದು ಹೇಳುತ್ತಿದ್ದೇವೆ.

**ಸಭಾಪತಿಯವರು:–** ಮಾನ್ಯ ಡಿ'ಸೋಜ ಅವರೇ, ಅವರು ಮಾತನಾಡುತ್ತಿದ್ದಾರೆ. ಮಾತನಾಡಲು ಬಿಡಿ. ಮಾನ್ಯ ಸಭಾನಾಯಕರೇ, ಅವರು ಮಾತನಾಡುವಾಗ ಇವರು ಏಕೆ ನಡುವೆ ಎದ್ದು ಮಾತನಾಡುತ್ತಾರೆ? ಇದೇನು ಹೊಲಸು ಚಟ? ಅವರಿಗೆ ನಾನು ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಇವರು ಏಕೆ ಮಾತನಾಡುತ್ತಾರೆ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಘನತೆವೆತ್ತ ರಾಜ್ಯಪಾಲರು ಭಾಷಣವನ್ನು ಮುಗಿಸಿ ಜೈಹಿಂದ್ ಎಂದು ಹೇಳಿ ಕೆಳಗೆ ಇಳಿದು ಹೋಗುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದಿಯಾಗಿ ಮೊದಲಿಗರಾಗಿದ್ದವರೇ ಕಾನೂನು ಸಚಿವರು. ಎಲ್ಲರೂ ಕೂಡ ಅವರನ್ನು ಹಿಂಬಾಲಿಸುತ್ತಿದ್ದಾಗ ತಾವೂ ಕೂಡ ಹಿಂಬಾಲಿಸಿದ ಸಂದರ್ಭದಲ್ಲಿ forthwith, "ಜೈಹಿಂದ್" ಎಂದ ತಕ್ಷಣ ರಾಷ್ಟ್ರಗೀತೆಯನ್ನು on ಮಾಡಬೇಕಾದ ಕರ್ತವ್ಯ ಅಲ್ಲಿದ್ದಂಥ ವಿಧಾನ ಸಭೆಯ ಅಧಿಕಾರಿಗಳು ಅಥವಾ ಯಾರದ್ದೋ ಇತ್ತು. ಅವರು ರಾಷ್ಟ್ರಗೀತೆ on ಮಾಡಿದ್ದರೆ ಅವರು ಎಲ್ಲಿದ್ದರೋ ಅಲ್ಲಿಯೇ ನಿಲ್ಲುತ್ತಿದ್ದರು, ರಾಷ್ಟ್ರಗೀತೆಗೆ ಗೌರವ ಸೂಚಿಸುತ್ತಿದ್ದರು. ಜೊತೆಗೆ ಎಲ್ಲರೂ ಹಿಂಬಾಲಿಸಿ ಹೋದರು. ಹಾಗಾದರೆ ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ ಅವಮಾನ ಮಾಡಿದಂತೆಯೇ? ಅಲ್ಲಿ mistake ಆಗಿದೆ. ಅದಕ್ಕೆ ಇವರು justification ಕೊಡುವುದು ಬೇಡ. ನಮ್ಮ ವಿಚಾರ ಇರುವುದು ರಾಜ್ಯಪಾಲರ ಭಾಷಣವನ್ನು forthwith ನೀವು ಹೇಳಿರುವುದನ್ನು ನಾವು ನೂರಕ್ಕೆ ನೂರು ಒಪ್ಪಿದ್ದೇವೆ. ಅವರು ಪೂರ್ಣ ಭಾಷಣ ಮಾಡಿದ್ದಾರೆ ಎಂದು ನಾವು ಒಪ್ಪಿದ್ದೇವೆ. ಆದರೆ ಇಲ್ಲಿ ಹೇಳಿರುವ ವಿಚಾರಕ್ಕೆ justification ಕೊಡಬೇಕು. ಮಾನ್ಯ ಸಭಾನಾಯಕರು ನಾನು ಹೇಳಿಲ್ಲ ಎಂದು ನೂರು ಬಾರಿ ಹೇಳಿದ್ದಾರೆ. ಅವರು ಹೇಳಿಲ್ಲ ಎಂದ ಮೇಲೆ ನಾನು ಸದನದ ಅಧಿಕೃತ ನಡವಳಿಗಳ ಪ್ರಿಂಟ್ ತರಿಸಿದೆ. ಅದನ್ನು ಓದಿದ ಮೇಲೆಯೂ ಅವರು ಹೇಳಿಲ್ಲ

ಎಂದ ಮೇಲೆ ಅದು ಹೇಗೆ ಸೂಚನೆಯಾಗುತ್ತದೆ, ಅದು ಹೇಗೆ ಅನುಮೋದನೆಯಾಗುತ್ತದೆ ಎಂಬುದು ನನ್ನ ಪ್ರಶ್ನೆ. ಇದು ಕಡತದಲ್ಲಿದೆ. Still it is on record.

**ಸಭಾಪತಿಯವರು:–** ನೀವು ನನಗೆ ಕೊಡಿ. ನಾನು ಅದನ್ನು ಪರಿಶೀಲಿಸಿ ತೀರ್ಮಾನ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಅಲ್ಲಿಯವರೆಗೆ ಸೂಚನೆಯಾಗುವಂತಿಲ್ಲ ಮತ್ತು ಅನುಮೋದನೆಯಾಗುವಂತಿಲ್ಲ. ಇದು ತೀರ್ಮಾನವಾಗಬೇಕು.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಸದನದ ಅಮೂಲ್ಯವಾದ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಬೇಕಂತಲೇ ಸದನ ನಡೆಯಬಾರದು ಎಂದು ಈ ರೀತಿ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಇದಕ್ಕೆ ಒಂದು ಪರಿಹಾರವನ್ನು ಸೂಚಿಸಿ. ಇದೇ ರೀತಿ ನಡೆಸೋಣವೇ ಅಥವಾ ಇದಕ್ಕೇನಾದರೂ ಒಂದು ತೀರ್ಮಾನ ಮಾಡುವುದೇ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಬಹಳ ಪ್ರತಿಭಾವಂತರಿದ್ದಾರೆ, ಮೇಧಾವಿಗಳಿದ್ದಾರೆ, ಅನುಭವಿಗಳಿದ್ದಾರೆ. ಅವರು ನಾನು ಆ ಮಾತನ್ನು ಹೇಳಿಲ್ಲ ಎಂದು ಹೇಳಲಿ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದರಲ್ಲಿ ಏನೂ ತಪ್ಪಿಲ್ಲ. ಅನುಚ್ಛೇದ 176 ಮತ್ತು 163ಗೆ ವಿರುದ್ಧವಾಗಿ ರಾಜ್ಯಪಾಲರು ನಡೆದುಕೊಂಡಿದ್ದಾರೆ. ರಾಷ್ಟ್ರಗೀತೆಗೆ ಅಗೌರವ ತೋರಿಸಿದ್ದಾರೆ ಎಂದು ನಾನು ಹೇಳಿದ್ದೇನೆ. ಅದರಲ್ಲಿ ಏನೂ ತಪ್ಪಿಲ್ಲ. ಯಾರು ಹಾಕಿಲ್ಲ ಎಂಬುದನ್ನು ನೋಡಬೇಕಾಗಿರುವುದು ಅವರು. ಸಭಾನಾಯಕನಾಗಿ ನಾನಲ್ಲ.

**ಸಭಾಪತಿಯವರು:–** ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಉಪ ಸಭಾಪತಿಯವರು, ಇಬ್ಬರು ಮುಖ್ಯ ಸಚೇತಕರು, ಮಾನ್ಯ ಭೋಜೇಗೌಡರು ನನ್ನ ಕೊಠಡಿಗೆ ಬನ್ನಿ. 10 ನಿಮಿಷಗಳ ಕಾಲ ಸದನವನ್ನು ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 11 ಗಂಟೆ 19 ನಿಮಿಷಗಳಿಗೆ 10 ನಿಮಿಷದಲ್ಲಿ ಕಾಲ ಮುಂದೂಡಲ್ಪಟ್ಟಿತು)**

(53) 28.01.2026 12.10 ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

**(ಬೆಳಗ್ಗೆ 11 ಗಂಟೆ 19 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 12 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನಲಂಕರಿಸಿದ್ದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರನ್ನು ಹೊರತುಪಡಿಸಿ ಬಿ.ಜೆ.ಪಿ.ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಸಭಾಪತಿಯವರು:-** ನಾವು ಒಂದು ತೀರ್ಮಾನ ಮಾಡುತ್ತೇವೆ. ದಯಮಾಡಿ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸದನ ನಡೆಯಬೇಕು ಎನ್ನುವುದೇ ನಮಗೂ ಕೂಡ ಇರತಕ್ಕಂಥದ್ದು. ಇದು ದುಂಡಾವರ್ತಿ ಹೆಚ್ಚಾಯಿತು. ನಮಗೂ Rule Book ಇದೆಯಲ್ಲವೇ? ಈ Rule Book ನಮಗೆ ಏತಕ್ಕೆ ಬೇಕು? ನಾವು ಏನನ್ನು demand ಮಾಡಿದ್ದೇವೆ? ಈ ರೀತಿಯ ಅಪಸ್ವರಗಳು ಬಂದಾಗ ಅಥವಾ ಏನಾದರೂ ಅಚಾತುರ್ಯಗಳು ನಡೆದಾಗ ಸರ್ಕಾರ ಸ್ವಲ್ಪ yield ಆಗಬೇಕಾಗುತ್ತದೆ. ಅದನ್ನು ಅವರು ಮಾಡುವುದೇ ಇಲ್ಲವೆಂದರೆ, ನಾವು ಬಿಡುವುದೇ ಇಲ್ಲ. ಸಂವಿಧಾನಕ್ಕೆ ಅಪಚಾರವಾದರೆ ಕೇಳಬಾರದು ಎನ್ನುವುದು ಇದೆಯೇ?

**ಸಭಾಪತಿಯವರು:-** ಕೇಳಬಹುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ಅಪಚಾರವಾಗಿದೆ. ಆದ್ದರಿಂದ ನಮ್ಮ demand ಇದೆ. ಅದನ್ನು ನಾವು ಒತ್ತಾಯ ಮಾಡುತ್ತಿದ್ದೇವೆ. ನಮಗೆ **[XXX]** ಮತ್ತು ವಂದನೆ ಇವೆರಡೂ ಒಟ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲ.

**Mr. CHAIRMAN:-** Correct.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವೆರಡೂ ಒಟ್ಟಿಗೆ ಹೋಗುವುದಾದರೆ ಅದು ನ್ಯಾಯಬದ್ಧ ಅಲ್ಲ. ಸಂವಿಧಾನ ವಿರೋಧಿಯೇ. ಆದ್ದರಿಂದ ತೀರ್ಮಾನ ಸರ್ಕಾರದ ಕಡೆಯಿಂದ ಬರಬೇಕೆಂಬುದು ನಮ್ಮ ವಾದ.

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನೀವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಭೋಜೇಗೌಡ ರವರೇ, ಈಗ ತಾವು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಬಹಳ ಸ್ಪಷ್ಟವಾಗಿ ನಾನು ಮೂರು-ನಾಲ್ಕು ಬಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ತಾವು lay ಮಾಡಿದ ಮರು ಘಳಿಗೆಯಲ್ಲೇ ಮಾನ್ಯ ಸಭಾನಾಯಕರು ಮಾತನಾಡಿರತಕ್ಕಂಥ ಮಾತುಗಳನ್ನು printout ತೆಗೆದು ನಾನು ಬಹಳ ಸ್ಪಷ್ಟವಾಗಿ ತಮ್ಮ ಮುಂದೆ ಕೂಡ ಓದಿದ್ದೇನೆ ಮತ್ತು ಮಾನ್ಯ ಪೀಠದ ಮುಂದೆ ಕೂಡ ಹೇಳಿದ್ದೇನೆ. ಹೇಳಿರುವುದರಲ್ಲಿ ಬಹಳ ಸ್ಪಷ್ಟವಾಗಿ 'ನಾವು ಖಂಡಿಸುತ್ತಿದ್ದೇವೆ' ಮತ್ತು 'ರಾಜ್ಯದ ಜನರಿಗೆ ಅವಮಾನ ಮಾಡುವ ರೀತಿಯಲ್ಲಿ ನಡೆದುಕೊಂಡಿದ್ದಾರೆ' ಎಂದು ಎರಡು ಪದಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಮಾತನಾಡುವಾಗ ನಿಮ್ಮದು ಇದೆಲ್ಲಾ ಏನೇ ಮಾತನಾಡಿರಲಿ. ವಂದನೆಯೇ ಅಥವಾ **[XXX]** ಹೇಳಿ ಎಂದು ಹೇಳಿದರು. ಮಾನ್ಯ ವಿರೋಧ ಪಕ್ಷದವರು ಕೂಡ ವಂದನೆಯೇ ಅಥವಾ **[XXX]** ಎಂದು ಹೇಳಿದ್ದಾರೆ. ನನ್ನದು ಕೂಡ ಅದೇ ಮಾತಿದೆ. ವಂದನೆ ಎಂದ ಮೇಲೆ ಮಾತನಾಡುವುದಕ್ಕೆ ಮಾತ್ರ ಮಾನ್ಯ ಐವನ್ ಡಿ'ಸೋಜಾ ರವರಿಗೆ ಅವಕಾಶ ಕೊಡತಕ್ಕಂಥದ್ದು.

**ಸಭಾಪತಿಯವರು:-** ಆಯಿತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಂತರ ಅದನ್ನು ಅನುಮೋದಿಸುವವರಿಗೆ ಅವಕಾಶ ಕೊಡಬೇಕು. ವಂದನೆಯನ್ನು ಹೇಳದೇ ಅವರಿಗೆ ಅವಕಾಶ ಕೊಟ್ಟಿದ್ದೀರಲ್ಲಾ, ಅದು ನಮ್ಮ objection.

**Mr. CHAIRMAN:-** Right. ಈಗ ಮಾನ್ಯ ಸಭಾನಾಯಕರು ಮಾತನಾಡಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಗೌರವಾನ್ವಿತ ರಾಜ್ಯಪಾಲರು ಭಾಷಣವನ್ನು ಮಂಡನೆ ಮಾಡಿದ ನಂತರ ತಮ್ಮ ಗಮನದಲ್ಲಿ ಮಂಡನೆ ಮಾಡಿರುವುದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ನಾನು 4 ಬಾರಿ ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಇದ್ದಂಥವನು. ಈಗ ಅವರು ರಾಷ್ಟ್ರಗೀತೆ ಮಾಡದಿರುವುಕ್ಕೆ ನಾವೆಲ್ಲಾ ಸದಸ್ಯರು ಸೇರಿ ನಾವು protest ಮಾಡುತ್ತೇವೆಂದು ಒಂದು letter ಅನ್ನು ಕೂಡ ಕೊಟ್ಟಿದ್ದೇವೆ. ಇಂತಹ ಸಂದರ್ಭದಲ್ಲಿ ಈಗ ಸನ್ಮಾನ್ಯ ಸದಸ್ಯರು ಕೂಡ ವಂದನೆಯೇ ಅಥವಾ **[XXX]** ಎಂದು ಕೇಳಿದ್ದಾರೆ. ನಮ್ಮ ಮಾನ್ಯ ಸದಸ್ಯರಿಗೆ ವಂದನೆ ಮಾಡುವುದಕ್ಕೆ ಈಗಾಗಲೇ ತಾವು ಆ ಪೀಠದಿಂದ ಆದೇಶ ಕೊಟ್ಟಿದ್ದೀರಿ. ಅದರಂತೆ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಅದನ್ನು ಮಂಡನೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಬಾಬು ರವರು ಅದನ್ನು ಅನುಮೋದನೆ ಮಾಡಿದ್ದಾರೆ. ಮಾನ್ಯ ಉಪ ಸಭಾಪತಿಯವರು ಬಂದ ನಂತರ ಕೂಡ ಅವರು ಮಾತನಾಡುವುದಕ್ಕೆ ಹೇಳಿದ್ದಾರೆ. ಅವರು 15 ನಿಮಿಷ ಈಗಾಗಲೇ ಮಾತನಾಡಿದ್ದಾರೆ. ಸರ್ಕಾರ ಅದನ್ನು ವಂದನೆ ಮಾಡುವುದರ ಪರವಾಗಿ ಇದ್ದೇವೆ ಎಂಬ ಮಾತನ್ನು ನಾನು ಸ್ಪಷ್ಟೀಕರಿಸುತ್ತಿದ್ದೇನೆ.

**[XXX] ಮಾನ್ಯಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಸಭಾಪತಿಯವರು:–** ಅಂದರೆ ವಂದನೆ ಮಾಡುವುದಕ್ಕೆ ನಿಮ್ಮ ಸಹಮತ ಇದೆ ಅಲ್ಲವೇ?

**ಶ್ರೀ ಎನ್.ಎಸ್.ಭೋಸರಾಜು:–** ಮಾನ್ಯ ಸಭಾಪತಿಯವರೇ, Yes.

**Mr. CHAIRMAN:–** Right. ಆಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಸಹಮತ ಕೂಡ ಇದೆ. ನಮ್ಮದೇನು ವಿರೋಧ ಇದೆಯೇ?

**ಸಭಾಪತಿಯವರು:–** ನಿಮಗೆ ಕೇಳಿಲ್ಲ. ಪ್ರಶ್ನೆ ಅವರಿಗೆ ಬಂದಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮದೇನೂ ವಿರೋಧ ಇಲ್ಲ. ನಿಮಗೂ double ಸಹಮತ ಇದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು 'ವಂದನಾ ನಿರ್ಣಯಕ್ಕೆ ನಮ್ಮ ಸಹಮತ ಇದೆ' ಎಂದು ಹೇಳಿದರು. ಅದಕ್ಕೆ ಒಪ್ಪಿದ್ದೇವೆಂದು ಹೇಳಿದರು. ಮತ್ತೆ ಇನ್ನೇನು ಹೇಳಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹೌದು, ಅವರು ಖಂಡಿಸಿದ್ದಾರೆ. ಅದಕ್ಕೆ ಕ್ಷಮೆ ಕೇಳಿ ವಿಷಾದ ವ್ಯಕ್ತಪಡಿಸಿ. ಇದು ನಾವು ಮಾಡಿದ್ದು ಸರಿಯಲ್ಲ, ಒಂದುವೇಳೆ ನಿಮಗೆ ನೋವಾಗಿದ್ದರೆ ನಾವು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಇಲ್ಲವೆಂದರೆ ಏನಿದು? ಸದನ ನಡೆಯಬೇಕು ಎನ್ನುವುದೇ ಎಲ್ಲರ ತೀರ್ಮಾನ. ನಾವೇನು ಇಲ್ಲಿಗೆ ಸುಮ್ಮನೆ ಬಂದಿಲ್ಲ.

**ಡಾ: ಯತೀಂದ್ರ.ಎಸ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಖಂಡಿಸಿರುವುದು ಭಾಷಣವನ್ನಲ್ಲ. ಗೌರವಾನ್ವಿತ ರಾಜ್ಯಪಾಲರ ನಡವಳಿಕೆಯನ್ನು ಮತ್ತು ರಾಷ್ಟ್ರಗೀತೆಗೆ ಅವರು ಗೌರವ ತೋರಿಸಿಲ್ಲವೆಂದು ಹೇಳಿರುವುದು. ಮಾನ್ಯ ಸಭಾನಾಯಕರು ಗೌರವಾನ್ವಿತ ರಾಜ್ಯಪಾಲರ ಭಾಷಣವನ್ನು ಅವರು **[XXX]** ಮಾಡಿಲ್ಲ. ಅವರು ಏತಕ್ಕೆ ಕ್ಷಮೆ ಕೇಳಬೇಕು?

**ಸಭಾಪತಿಯವರು:–** ಆಯಿತು, ಮುಗಿದಿದೆಯಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡಬಹುದೇ, ಈಗ ಗೊತ್ತಾಯಿತೇ.

(ಗೊಂದಲ)

**[XXX] ಮಾನ್ಯಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಡಾ: ಯತೀಂದ್ರ.ಎಸ್:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಭಾಷಣ ಬೇರೆ. ಅವರು ನಡೆದುಕೊಂಡಿರುವ ದಾಟಿಯು ಬೇರೆ. **(ಗೊಂದಲ)** ಎರಡನ್ನೂ mix ಮಾಡಬಾರದು. ರಾಜ್ಯಪಾಲರ ಭಾಷಣವನ್ನು ರಾಜ್ಯ ಸರ್ಕಾರ ತಡೆ ಎಲ್ಲಿ ಮಾಡಿದೆ? **(ಗೊಂದಲ)** ಅದನ್ನು ನಾವು **[XXX]** ಮಾಡಿಲ್ಲ.

**(ಗೊಂದಲ)**

**ಶ್ರೀ ಶಿವಕುಮಾರ್.ಕೆ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶಿವಕುಮಾರ್ ರವರೇ, ತಾವು ಕುಳಿತುಕೊಳ್ಳಿ. ಒಬ್ಬರು ಮಾತನಾಡುವಾಗ ಬೇರೆಯವರು ಎದ್ದು ಮಾತನಾಡಬಾರದು.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ನಾನು . . .

**(ಗೊಂದಲ)**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಮ್ಮ ಸಮ್ಮುಖದಲ್ಲಿ ನಡೆದಿರತಕ್ಕಂಥ ಮಾತನ್ನು ನಾನು ಇಲ್ಲಿ ಬಂದು ಹೇಳಿದ್ದೇನೆ. ಅದು ಆದನಂತರ ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಮಾನ್ಯ ಸದಸ್ಯರೆಲ್ಲರೂ ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**ಸಭಾಪತಿಯವರು:–** ಮಾನ್ಯ ಸಿ.ಟಿ.ರವಿಯವರೇ, ಒಂದು ನಿಮಿಷ. ಮಾನ್ಯ ಹರಿಪ್ರಸಾದ್ ರವರು ಮಾತನಾಡುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅದಕ್ಕೆ 'ವಂದನೆ ಎಂದು ಹೇಳಬೇಕು, ಅನುಮೋದನೆ' ಎಂದು ಹೇಳಬಾರದು ಎಂದು ಹೇಳುತ್ತಿದ್ದಾರೆ. ಇಲ್ಲಿ ಪ್ರಶ್ನೆ ಬಂದಿರತಕ್ಕಂಥದ್ದು ಗೌರವಾನ್ವಿತ ರಾಜ್ಯಪಾಲರು ಯಾವಾಗಲಾದರು ಭಾಷಣ ಮಾಡುವಾಗ 'ನನ್ನ ಸರ್ಕಾರ' ಎಂದು ಭಾಷಣ ಮಾಡಬೇಕಾಗಿತ್ತು. ಆದರೆ ಅವರು 'ನನ್ನ ಸರ್ಕಾರ' ಎಂದು ಅವರು ಭಾಷಣ ಮಾಡದಿದ್ದರೆ ನಾವೇನು ಮಾಡಬೇಕು? ಅಂದರೆ ಇಲ್ಲಿ ಶ್ರೀ ಎನ್.ಎಸ್.ಬೋಸ್‌ರಾಜು ರವರು ಏನು ಹೇಳಿದ್ದಾರೋ ಅದು ಚರ್ಚೆ ಆಗಬೇಕೆಂದರೆ ಗೌರವಾನ್ವಿತ ರಾಜ್ಯಪಾಲರ ನಡವಳಿಕೆ ಬಗ್ಗೆಯೂ ಕೂಡ ಚರ್ಚೆಯಾಗಬೇಕಾಗುತ್ತದೆ. ಅವರು ರಾಷ್ಟ್ರಗೀತೆಗೆ ಅಪಮಾನ ತೋರಿಸುವಾಗ ನಾವೆಲ್ಲರೂ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

**[XXX] ಮಾನ್ಯಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್ ರವರೇ, ಇರಲಿ ಬಿಡಿ, ಆಗ ನೀವು ಇರಲಿಲ್ಲ. ಅದೆಲ್ಲಾ ಮುಗಿದಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ದುಂಡಾವರ್ತನೆ. ಗೌರವಾನ್ವಿತ ರಾಜ್ಯಪಾಲರು 'ನನ್ನ ಸರ್ಕಾರ' ಎಂದು ಹೇಳಿದ್ದಾರೆ. **(ಗೊಂದಲ)** ಇದು ಪುಂಡಾಟಿಕೆ. ಇಲ್ಲಿ ಪುಂಡಾಟಿಕೆ ಬೇಡ, ಇದು ಸದನ. ಈ ಸದನದಲ್ಲಿ ಪುಂಡಾಟಿಕೆ ನಡೆಯುವುದಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರನ್ನು ಹೊರತುಪಡಿಸಿ ಬಿ.ಜೆ.ಪಿಯ ಸದಸ್ಯರುಗಳು ಸದನದ ಬಾವಿಯಲ್ಲಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ತಾವು ಮಾತನಾಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ತಮ್ಮ ಸ್ಥಾನಕ್ಕೆ ತೆರಳಿದರು)

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾವುದೇ ವಿಷಯವು ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ಗೌರವಾನ್ವಿತ ರಾಜ್ಯಪಾಲರು ತನ್ನ ವಿವೇಚನಾನುಸಾರ ಕಾರ್ಯನಿರ್ವಹಿಸಬೇಕೆನ್ನುವುದು ಅಗತ್ಯಪಡಿಸಿರುವ ವಿಷಯವೇ ಅಥವಾ ಅಲ್ಲವೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ರಾಜ್ಯಪಾಲರು ತನ್ನ ವಿವೇಚನಾನುಸಾರ ಕೈಗೊಂಡ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ರಾಜ್ಯಪಾಲರು ಕೈಗೊಂಡ ಯಾವುದೇ ಕಾರ್ಯದ ಸಿಂಧುತ್ವವನ್ನು ಅವರು ತನ್ನ ವಿವೇಚನಾನುಸಾರ ಕಾರ್ಯನಿರ್ವಹಿಸಬೇಕಾಗಿತ್ತು ಅಥವಾ ನಿರ್ವಹಿಸಬಾರದಾಗಿತ್ತು ಎಂಬ ಕಾರಣದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(ಮುಂದು)

(54)28.1.2025/12.20/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಧರಣಿನಿರತರಾಗಿದ್ದರು)**

**ಶ್ರೀ ಸಿ.ಟಿ. ರವಿ (ಮುಂದು):-**

**26. ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸಬೇಕಾದ ಕ್ರಮ:** ಸಂವಿಧಾನದ 175 ಅಥವಾ 176ನೇ ಅನುಚ್ಛೇದದ ಮೇರೆಗೆ ವಿಧಾನಮಂಡಲದ ಉಭಯ ಸದನಗಳು ಒಟ್ಟಿಗೆ ಸಭೆ ಸೇರುವಾಗ ಅಥವಾ 175ನೇ ಅನುಚ್ಛೇದದ ಮೇರೆಗೆ ವಿಧಾನ ಪರಿಷತ್ ಮಾತ್ರ ಸಭೆ ಸೇರಿದಾಗ ಆ ಸಮಯದಲ್ಲಿ ರಾಜ್ಯಪಾಲರು ಬರುವಾಗ ಅಥವಾ ಹೊರಡುವಾಗ ಅಥವಾ ಅವರ ಭಾಷಣದ ಅವಧಿಯಲ್ಲಿ ಯಾರೇ ಸದಸ್ಯರು ಯಾವುದೇ ಭಾಷಣ ಮಾಡುವ ಮೂಲಕ ಅಥವಾ ಯಾವುದೇ ಕ್ರಿಯಾಲೋಪವೆತ್ತಿ ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಂಟು ಮಾಡತಕ್ಕುದಲ್ಲ ಅಥವಾ ವಿಘ್ನವನ್ನುಂಟು ಮಾಡತಕ್ಕುದಲ್ಲ ಮತ್ತು ಅಂಥ ಅಡ್ಡಿಯನ್ನು ಅಥವಾ ವಿಘ್ನವನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು

ಹಾಗೂ ರಾಜ್ಯಪಾಲರಿಗೆ ತೋರಿದ ಅಗೌರವವೆಂದು ಪರಿಗಣಿಸತಕ್ಕುದ್ದು ಮತ್ತು ಅಂಥ ಸದಸ್ಯ ಅಥವಾ ಸದಸ್ಯರನ್ನು ಸದನದಲ್ಲಿ ಮಂಡಿಸಬಹುದಾದ ಪ್ರಸ್ತಾವದ ಮೇರೆಗೆ ಅಧಿವೇಶನದ ಗೊತ್ತುಪಡಿಸಿದ ಅವಧಿಗೆ ಅಥವಾ ಉಳಿದ ಅವಧಿಗೆ ಅಮಾನತ್ತುಗೊಳಿಸತಕ್ಕದ್ದು. ಇದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದ ಪುಟ ಸಂಖ್ಯೆ 17ರಲ್ಲಿದೆ.

**ಸಭಾಪತಿಯವರು:-** ನಾನು ನೋಡಿದ್ದೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಾವು ಯಾರನ್ನೂ ಸಾಕ್ಷಿಯಾಗಿ ಪರಿಗಣಿಸುತ್ತಿಲ್ಲ. ನೀವೇ ಸಾಕ್ಷಿ. ಏನೂ ನಡೆದಿಲ್ಲ ಎಂದು ನೀವು ಹೇಳಿಬಿಟ್ಟರೆ ನಾವು ಯಾರ ಮೇಲೂ ಆರೋಪ ಹೊರಿಸುವುದಿಲ್ಲ. ಏನಾದರೂ ನಡೆದಿದೆ ಎಂದರೆ ನ್ಯಾಯಪೀಠದಲ್ಲಿರುವ ನಿಮ್ಮ ನ್ಯಾಯ ಏನು ಎಂದು ಕೇಳಬಯಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು ಮಾತನಾಡುವಾಗ ಹೇಳಿದರು. ರಾಜ್ಯಪಾಲರ ಭಾಷಣವನ್ನು ಎಲ್ಲಿಯವರೆಗೆ ಓದಿದರೆಂದರೆ ಅದನ್ನು ಹಿಂದಿಯಲ್ಲಿ ಹೇಳಿದ್ದಾರೆ, ಅದು ಕನ್ನಡದಲ್ಲಿಯೂ ಕೂಡ ಇದೆ. ಏನು ಹೇಳಿದ್ದಾರೆಂದರೆ, ''ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ನನಗೆ ಅತೀವ ಸಂತೋಷವಾಗುತ್ತಿದೆ. ನನ್ನ ಸರ್ಕಾರವು ಅಭಿವೃದ್ಧಿ, ಸಾಮಾಜಿಕ ನ್ಯಾಯ, ಹಣಕಾಸಿನ ಶಿಸ್ತು, ಪ್ರಾದೇಶಿಕ ನ್ಯಾಯ, ಜನಸ್ನೇಹಿ ಆಡಳಿತ, ಕಾನೂನು ಸುವ್ಯವಸ್ಥೆ ಮುಂತಾದವುಗಳಲ್ಲಿ ಅಭೂತಪೂರ್ವ ಸಾಧನೆಗಳನ್ನು ಮಾಡುತ್ತಿದೆ''. ಅಲ್ಲಿಗೆ ನಿಲ್ಲಿಸಿ 'ಜೈ ಹಿಂದ್, ಜೈ ಕರ್ನಾಟಕ' ಎಂದಿದ್ದಾರೆ. ಅಂದರೆ ನನ್ನ ಸರ್ಕಾರ ಎಂದು ಅವರು ಹೇಳಿದ ಮೇಲೆ ಅವರ ಬಾಯಿಂದ ಕೇಂದ್ರ ಸರ್ಕಾರದ ಅನುಸರಣೆಯಿಂದ ನಡೆಯುತ್ತಿದ್ದಾರೆ ಎನ್ನುವ ಮಾತೆಲ್ಲಿಂದ ಬಂತು?

**ಸಭಾಪತಿಯವರು:-** ನನ್ನ ಸರ್ಕಾರ ಎಂದು ಹೇಳಿದ್ದಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ನನ್ನ ಸರ್ಕಾರ ಎಂದು ಹೇಳಿರುವುದು it is very clear.

**ಸಭಾಪತಿಯವರು:-** ಈಗ ನಾನು ಸದನಕ್ಕೆ ಒಂದು ಮಾಹಿತಿ ಕೊಡುತ್ತೇನೆ. ನಾನು ಸದನವನ್ನು ಮುಂದೂಡಿದ ನಂತರ ಸಭಾನಾಯಕರು, ವಿರೋಧಪಕ್ಷದ ನಾಯಕರು, ಇಬ್ಬರು ಚೀಫ್ ವಿಪ್‌ಗಳು ಮತ್ತು ತಮ್ಮನ್ನು ಕರೆದು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅಲ್ಲಿ ಏನು ಮಾತನಾಡಿದೆವೆಂದು ಹೇಳುವುದಕ್ಕೆ ಬಂದಿದ್ದೇನೆ. ನೀವು ಒಂದು ಪ್ರಸ್ತಾಪ ಮಾಡಿದಿರಿ. ಸಭಾನಾಯಕರು ಅದಕ್ಕೆ ನಮಗೂ ಸಹಮತಿ ಇದೆ, ರಾಜ್ಯಪಾಲರಿಗೆ ವಂದನೆಯನ್ನು ಹೇಳುತ್ತೇವೆಂದು ಹೇಳಿದ್ದಾರೆ. ಇದನ್ನು ಇಷ್ಟಕ್ಕೆ ಮುಗಿಸಬೇಕೆಂದು ತೀರ್ಮಾನ ಮಾಡಿ ಸದನಕ್ಕೆ ಬಂದರು. ಸಭಾನಾಯಕರು ತಾವು ವಂದನೆಯ ಪರವಾಗಿದ್ದೇವೆ ವಂದನೆಯನ್ನು ಸಲ್ಲಿಸುತ್ತೇವೆಂದು ಹೇಳಿದಾಗ ಅದನ್ನು ಇಲ್ಲಿಗೇ ಮುಗಿಸಬೇಕು. ಅಲ್ಲಿ ಮಾತನಾಡಿ ಬಂದು;

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಅವರು ವಿಷಾದ ವ್ಯಕ್ತಪಡಿಸಬೇಕು.

**ಸಭಾಪತಿಯವರು:–** ನಾವು ವಂದನೆಯ ಪರವಾಗಿದ್ದೇವೆ ಎಂದರೆ ಆಯಿತಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಆಯಿತು, ನಾವೆಲ್ಲಾ ತಪ್ಪು ಮಾತನಾಡಿದಾಗ ತಾವು ನಮ್ಮಿಂದ ಏತಕ್ಕೆ ಕ್ಷಮೆ ಕೇಳಿಸುತ್ತೀರಿ?

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಿಮ್ಮ ಕಛೇರಿಯಲ್ಲಿ ಸುಮಾರು ಒಂದು ಗಂಟೆ ಚರ್ಚೆ ಮಾಡಿ ಅಂತಿಮವಾಗಿ ತೀರ್ಮಾನ ಮಾಡಿ ಸಭಾನಾಯಕರು ಈಗಾಗಲೇ ಅದನ್ನು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಂತಿಮ ತೀರ್ಮಾನವಾಗಿಲ್ಲ. ನಾವು ಎದ್ದು ಬಂದಿದ್ದೇವೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅವರೇನಾದರೂ ಸದನ ನಡೆಯಬಾರದೆಂದು ತೀರ್ಮಾನ ಮಾಡಿಕೊಂಡು ಬಂದಿದ್ದಾರಾ? ಅದು ಬೇರೆ ವಿಚಾರ. ಆದರೆ ಒಂದು ಗಂಟೆಯ ಚರ್ಚೆಯಲ್ಲಿ ಅವರು ವಂದನಾ ನಿರ್ಣಯಕ್ಕೆ ಸಹಮತ ವ್ಯಕ್ತಪಡಿಸುತ್ತೇವೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ತಾವು ದಯವಿಟ್ಟು ಸಹಕಾರ ಕೊಡಬೇಕು.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಕಾನೂನು ಸಚಿವರು ಹೇಳಿದಾಗಲೂ ಅದನ್ನೇ ಹೇಳಿದರು. ಪರವಾಗಿದ್ದೀರಾ ಅಥವಾ ವಿರೋಧವಾಗಿದ್ದೀರಾ ಯಾವುದಾದರೂ ಒಂದು ತೀರ್ಮಾನವಾಗಬೇಕು. ತಾವು ಬಂದು ಬಿಟ್ಟಿರಿ. ಮಾನ್ಯ ಭೋಜೇಗೌಡರ ಸಮ್ಮುಖದಲ್ಲಿ ಸಭಾಪತಿಯವರು, ಉಪ ಸಭಾಪತಿಯವರು, ನಾನು ಮತ್ತು ಚೀಫ್ ವಿಪ್‌ರವರು ಇದ್ದಾಗ ಬಂದಿರುವಂತಹ ವಿಷಯವನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ನೀವು ಪರವಾಗಿದ್ದೀರಾ ಅಥವಾ ಪರವಾಗಿಲ್ಲವೇ ಎಂದು ಹೇಳಬೇಕೆಂದರು. ಸಭಾಪತಿಗಳ ಸಮ್ಮುಖದಲ್ಲಿ ಏನು ಆಗಿತ್ತು ಅದನ್ನು ಪ್ರಸ್ತಾಪ ಮಾಡಿದರು. ಅದಕ್ಕೆ ನಾವು ನಮ್ಮ ಸಹಮತಿ ಇದೆಯೆಂಬ ಮಾತನ್ನು ಹೇಳಿದ್ದೇವೆ. ತಾವು ಮಾತನಾಡುತ್ತಿದ್ದಿರಿ. ಮಾನ್ಯ ಕಾನೂನು ಸಚಿವರ ಮುಂದೆ ಸಹ ತಾವು ಪರವಾಗಿದ್ದೀರಾ ಅಥವಾ ವಿರುದ್ಧವಾಗಿದ್ದೀರಾ ಅದನ್ನು ಸ್ಪಷ್ಟಪಡಿಸಬೇಕೆಂದು ಕೇಳಿದಿರಿ. ನಾವು ಈಗ ಸ್ಪಷ್ಟವಾಗಿ ಹೇಳುತ್ತಿದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. **[XXX]** ಅಥವಾ ವಂದನೆ. ಎರಡೂ ಒಟ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ನೀವು ಮೊದಲು ನಿಂದಿಸಿದ್ದೀರಿ. ಈಗ ವಂದನೆ ಆಗಬೇಕಾ? ವಂದನೆ ಮಾಡುವುದಕ್ಕೆ ನಾವು ನಿಮ್ಮ ಜೊತೆಯಲ್ಲಿದ್ದೇವೆ. ಆದರೆ **[XXX]** ಮಾಡಿದಿರಲ್ಲಾ ಅದಕ್ಕೆ ನಾವು ಏನು ಮಾಡಬೇಕು?

**ಸಭಾಪತಿಯವರು:–** ಒಂದು ನಿಮಿಷ. **[XXX]** ಮಾಡಿದ್ದಕ್ಕೆ ಅವರು ಈಗ ವಂದನೆ ಎಂದಾಗ **[XXX]** ಎನ್ನುವುದು automatic ಆಗಿ ಹೋಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು ಹೋಗುವುದಿಲ್ಲ. ಇದು ಹೇಗಿದೆಯೆಂದರೆ, ಕದ್ದ ಮಾಲನ್ನು ವಾಪಸ್ ಕೊಟ್ಟರೆ ಕಳ್ಳತನವೇ ಆಗಿಲ್ಲ ಎನ್ನುವಂತಾಗುತ್ತದೆ. ಇದು ಸರಿ ಇದೆಯೇ? ಈ ಸರ್ಕಾರ ಕದ್ದ ಮಾಲನ್ನು ವಾಪಸ್ ಕೊಟ್ಟರೆ ಕಳ್ಳತನವೇ ಆಗಿಲ್ಲ ಎಂದರೆ ಅದು ಸರಿ ಇದೆಯೇ? ಇದು ಈ ನೀತಿಯೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, (**ಗೊಂದಲ**)

**ಸಭಾಪತಿಯವರು:–** ಒಂದು ನಿಮಿಷ. ನಿನಗೆ ಕೈಯನ್ನಾದರೂ ಮುಗಿಯಲೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇವರು ಏನು ಮಾಡಿದರೂ ಸದನ ನಡೆಯಬೇಕೇ?

**ಸಭಾಪತಿಯವರು:–** ಒಂದು ನಿಮಿಷ ಇರಿ. ಉಪ ಸಭಾಪತಿಯವರು ಮಾತನಾಡುತ್ತಾರೆ.

**ಶ್ರೀ ಎಂ.ಕೆ. ಪ್ರಾಣೇಶ್ (ಉಪ ಸಭಾಪತಿಯವರು):–** ಮಾನ್ಯ ಸಭಾಪತಿಯವರೇ, ಬಹುಶಃ ಸದನದಲ್ಲಿ ಈ ಘಟನೆಗಳು ನಡೆಯಬಾರದು. ಆದರೆ ಘಟನೆಗಳು ನಡೆದುಬಿಟ್ಟಿವೆ. ಅದಕ್ಕೆ ಎಲ್ಲಾದರೂ ಒಂದು ಕಡೆ ಪರಿಹಾರ ಕಂಡುಕೊಳ್ಳುವ ಜವಾಬ್ದಾರಿ ಪೀಠಕ್ಕಿದೆ. ನಾವೆಲ್ಲಾ ಸಾರ್ವಜನಿಕರಿಂದ ಚುನಾಯಿತರಾಗಿ ಬಂದು ಸದನದಲ್ಲಿದ್ದೇವೆ. ಹೊರಗಡೆಯವರಿಗೆ ಒಳ್ಳೆಯ ಮಾಹಿತಿಗಳನ್ನು ಕೊಡುವುದು, ಮುಂದೆ ಬರುವಂತಹ ಚುನಾಯಿತ ಪ್ರತಿನಿಧಿಗಳಿಗೆ ನಾವು ಮಾರ್ಗದರ್ಶಕರಾಗಿರಬೇಕಾದುದು ನಮ್ಮೆಲ್ಲರ ಜವಾಬ್ದಾರಿ ಕೂಡ ಆಗಿದೆಯೆಂದು ಅಂದುಕೊಂಡಿದ್ದೇನೆ. ಹಾಗಾಗಿ ಮೊನ್ನೆ ನಡೆದಂತಹ ಘಟನೆಯನ್ನು ನಮ್ಮ ಮೂಗಿನ ಪರವಾಗಿ ನಾವು ಸಮರ್ಥನೆ ಮಾಡಿಕೊಳ್ಳುವ ಬದಲಾಗಿ ಇನ್ನು ಆ ತರಹದ ಅಹಿತಕರ ಘಟನೆಗಳು ನಡೆಯಬಾರದು. ಆ ದೃಷ್ಟಿಯಿಂದ ನಾವು ಯೋಚನೆ ಮಾಡುವುದು ಒಳಿತು ಎಂಬುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದು ವಂದನೆನಾ **[XXX]** ಎನ್ನುವುದನ್ನು ತಾವು ತಿಳಿಸಬೇಕು ಎನ್ನುವುದು ಇವರ ಅಭಿಪ್ರಾಯವಾಗಿತ್ತು. ಹಾಗಾಗಿ ಸಭಾನಾಯಕರು ಇದನ್ನು **[XXX]** ಮಾಡುವ ಬದಲಾಗಿ ವಂದನಾ ನಿರ್ಣಯಕ್ಕೆ ಸಹಕಾರ ಕೊಡುವ ಜವಾಬ್ದಾರಿಯೂ ಕೂಡ ನಿಮಗಿದೆ. 'ರಾಜ್ಯಪಾಲರು' ಎಂದರೆ ಸಂವಿಧಾನದಲ್ಲಿ ಅದರ ಬಗ್ಗೆ ಉಲ್ಲೇಖ ಕೂಡ ಆಗಿದೆ. ಅವರ ಮುಂದೆ ಸದನದ ಒಳಗಡೆ ಮಾತನಾಡುವಂತಹ ಹಕ್ಕನ್ನು ನಾವ್ಯಾರೂ ಪಡೆದುಕೊಂಡಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಆ ಹಕ್ಕನ್ನು ಮೀರಿ ಮಾತನಾಡುವಂಥದ್ದನ್ನು ತಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಹಲವಾರು ಜನ ಹಿರಿಯರಿದ್ದಾರೆ, ಮಂತ್ರಿಗಳಿದ್ದಾರೆ ಹಿರಿಯ ಗೌರವಾನ್ವಿತ ಶಾಸಕರುಗಳಿದ್ದಾರೆ, 45 ವರ್ಷಗಳ ಕಾಲ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿ ವಿವಿಧ ಸ್ತರದ ಮಂತ್ರಿಗಳಿಂದ ಹಿಡಿದು ಉಪ ಸಭಾಪತಿಯಾಗಿ ಜವಾಬ್ದಾರಿಯನ್ನು ನಿರ್ವಹಿಸಿದಂತಹವರು ಇವತ್ತು ಪೀಠವನ್ನು ಅಲಂಕಾರ ಮಾಡಿರುವುದರಿಂದ ಸಾಮಾನ್ಯವಾಗಿ ಪೀಠ ಏನು

**[XXX] ಮಾನ್ಯಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

ನಿರ್ಣಯವನ್ನು ತೆಗೆದುಕೊಳ್ಳುತ್ತದೆ ಆ ನಿರ್ಣಯಕ್ಕೆ ಎಲ್ಲರೂ ಬದ್ಧರಾಗಿರುವಂಥಹದ್ದು ನಮ್ಮ ಕರ್ತವ್ಯ ಎಂದು ತಾವೆಲ್ಲರು ಭಾವಿಸಬೇಕಾಗುತ್ತದೆ. ಹಾಗಾಗಿ ಅವರು **[XXX]** ಯನ್ನು ಕೈ ಬಿಡುತ್ತೇವೆ, ವಂದನೆಯನ್ನು ಮಾಡುವಂತಹ ಯೋಚನೆಯನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಹಾಗಾಗಿ ನೀವೆಲ್ಲರೂ ಕೂಡ **[XXX]** ಎನ್ನುವಂಥಹ ಶಬ್ಧವನ್ನು ತೆಗೆದು ವಂದನೆ ಎನ್ನುವಂಥ ಶಬ್ಧವನ್ನು ಇದರಲ್ಲಿ ಸೇರಿಸಿಕೊಂಡು ಈ ಸದನ ಸುಲಲಿತವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದು ಒಳಿತು ಎಂದು ಎಲ್ಲಾ ಪಕ್ಷದ, ವಿರೋಧಪಕ್ಷದ ನಾಯಕರುಗಳಿಗೆ, ಆಡಳಿತ ಪಕ್ಷದ ನಾಯಕರುಗಳಿಗೆ ಹೇಳುತ್ತಾ ಹಾಗೆಯೇ ಸದಸ್ಯರುಗಳು ಕೂಡ ಕಾನೂನು ಮಂತ್ರಿಗಳು ಮಾತನಾಡಬೇಕಾದರೆ, ಸಚಿವರು ಹಾಗೂ ಸಭಾನಾಯಕರು ಮಾತನಾಡಬೇಕಾದರೆ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ನೀವು ಯಾವುದೋ ಒಂದು ವಿಚಾರವನ್ನು ತೆಗೆದು ಗೊಂದಲವನ್ನು ಸೃಷ್ಟಿ ಮಾಡುವಂಥದ್ದು, ಇಲ್ಲೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಅಥವಾ ಜೆ.ಡಿ(ಎಸ್) ಪಕ್ಷದ ನಾಯಕರು ಮಾತನಾಡಬೇಕಾದರೆ ಆ ವಿಚಾರಗಳ ಮಧ್ಯೆ ನಾವು ಮಾತನಾಡಬೇಕಾದಾಗ ಸಭೆಯ ಒಳಗಡೆ ಪೀಠದ ಮುಂದೆ ತಾವು ಕೈ ತೋರಿಸಿ ನಿಂತು ಅವಕಾಶ ಕೊಟ್ಟಾಗ ಮಾತನಾಡುವಂಥದ್ದು. ಅವಕಾಶ ಕೊಡದಿದ್ದಾಗ ಪೀಠವನ್ನು ವಿರೋಧ ಮಾಡುವಂತಹ ಕೆಲಸಗಳನ್ನು ಯಾರೂ ಮಾಡಬಾರದು ಎಂದು ಹೇಳಿ ಇದಕ್ಕೊಂದು ಸುಖಾಂತ್ಯವನ್ನು ಮಾಡಬೇಕೆಂದು ಮಾನ್ಯ ಸಭಾಪತಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ನಾನು ವಿರೋಧ ಪಕ್ಷದ ನಾಯಕರನ್ನು, ಸಭಾನಾಯಕರನ್ನು, ಇಬ್ಬರು ಚೀಫ್ ವಿಪ್ ಅವರನ್ನು ಮತ್ತು ಮಾನ್ಯ ಎಸ್.ಎಲ್. ಭೋಜೇಗೌಡರನ್ನು ಕರೆದು ಚರ್ಚೆ ಮಾಡಿದ್ದೇನೆ. ಅವರು ಆಗ ವಿರೋಧವನ್ನು ವ್ಯಕ್ತ ಪಡಿಸಿ **[XXX]** ಎಂದಿದ್ದರು **[XXX]** ಮಾಡಿದ್ದು ತಪ್ಪು ಎಂದು ಹೇಳಿದರು. ಇವರು ವಂದನೆ ಎಂದು ಹೇಳಿದರು. ಈಗ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಏನಾದರೂ ತಪ್ಪು ಮಾಡಿದ್ದರೆ ಅದನ್ನು ಹಿಂತೆಗೆದುಕೊಳ್ಳುತ್ತೇವೆ ಎಂದರೆ ಅರ್ಥವೇನು? ಈಗ ಅವರು ವಂದನೆಯನ್ನು ಒಪ್ಪಿದ್ದಾರೆ. ನಾವೆಲ್ಲರೂ ವಂದನೆಯ ಪರವಾಗಿದ್ದೇವೆ, ವಂದನೆಯನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳಿದಾಗ ಅದು 'Null and Void' ಆಯಿತು. ಅದು ಮುಗಿದು ಹೋಯಿತು. ಅದಕ್ಕೆ ಮಾನ್ಯ ಎಸ್.ಎಲ್. ಭೋಜೇಗೌಡರು ಎರಡೂ ಸರಿ ಸಮ ಎಂದು ಹೇಳಿದ ವಿಚಾರವನ್ನು ಅವರು ಪ್ರಸ್ತಾಪಿಸಿದರು. ಈ ಸದನ ನಡೆಯಬೇಕೆನ್ನುವ ಹಿತದೃಷ್ಟಿಯಿಂದ ಮಾನ್ಯ ಸಭಾನಾಯಕರು ಹೇಳಿದ್ದಾರೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮ ಆಕ್ಷೇಪಣೆ ಇಲ್ಲ. ಒಂದು ಸಲ ನಿಂದಿಸಿದ ಮೇಲೆ ಒಂದು ವಿಷಾದ ಹೇಳಬೇಕು. ಇಲ್ಲದಿದ್ದರೆ ಸದನವೇ ತಪ್ಪು ಮಾಡಿದ ಹಾಗಾಗುತ್ತದೆ. ಈ ಅಪಚಾರ ಪೀಠಕ್ಕೂ ಬರುತ್ತದೆ. ಅದು ಬರಬಾರದು.

**[XXX] ಮಾನ್ಯಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಸಭಾಪತಿಯವರು:-** ಅವರು ಈಗ ವಂದನೆ ಪರವಾಗಿದ್ದೇವೆ ಎಂದಾಗ **[XXX]** ಹೋಯಿತಲ್ಲವೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿನ್ನೆ ನೀವು ಮಂಡನೆ ಮಾಡುವುದಕ್ಕೆ ಪ್ರಾರಂಭ ಮಾಡಿದಾಗಲೆ ಅದರ ಪರವಾಗಿದ್ದೇವೆ ಎಂದರ್ಥ. ಇದಕ್ಕೆ ಚರ್ಚೆ ಏಕೆ ಬೇಕಾಗಿತ್ತು? (ಮುಂದು)

(55) 28-01-2026 12-30 KH/BNS (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಧರಣಿ ನಿರತರಾಗಿದ್ದರು)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 22ನೇ ತಾರೀಖು ನಾವು ಖಂಡಿಸುತ್ತಿದ್ದೇವೆ ಎಂದು on record ಇದೆಯಲ್ಲವೇ? ಆ ರೆಕಾರ್ಡ್ ಅನ್ನು ನೀವು ಏನು ಮಾಡುತ್ತೀರಿ?

**ಶ್ರೀ ಛಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆ **[XXX]** ಯಾರು ವಿಷಾದ ವ್ಯಕ್ತಪಡಿಸುತ್ತಾರೆ? ಅದನ್ನು ನಾನು ಮಾಡಲೇ? ಆ ವಿಷಾದವನ್ನು ನಾನು ವ್ಯಕ್ತಪಡಿಸಲೇ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅದನ್ನು ಹಾಗೆಯೇ ಇಟ್ಟುಕೊಂಡು ಏಕಪಾತ್ರಾಭಿನಯ ಮಾಡುವುದಕ್ಕೆ ಬಿಡುತ್ತೀರಾ? 22ನೇ ತಾರೀಖು ಮಾನ್ಯ ಸಭಾನಾಯಕರು ಹೇಳಿರುವಂತಹ ರೆಕಾರ್ಡ್ ಅನ್ನು ಏನು ಮಾಡುತ್ತೀರಿ?

**(ಈ ಹಂತದಲ್ಲಿ ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ) (ಸ್ವಸ್ಥಾನದಿಂದ):-** ಮಾನ್ಯ ಸಭಾಪತಿಯವರೇ, . .

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ ಆಯಿತು. ಮಾನ್ಯ ಪ್ರತಾಪ್ ಸಿಂಹ ನಾಯಕ್ ರವರೇ ಹೇಳಿ.

**[XXX] ಮಾನ್ಯಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ಮಾತು. ನಿನ್ನೆಯಿಂದ ಇವತ್ತಿನವರೆಗೂ ಆಗಿರುವಂತಹ ಚರ್ಚೆಯ ಬಗ್ಗೆ ನಾವೊಮ್ಮೆ ಆಲೋಚನೆ ಮಾಡಿದರೆ ಮಾನ್ಯ ರಾಜ್ಯಪಾಲರ ಸ್ಥಾನ ಮತ್ತು ಸಂವಿಧಾನದ ಗೌರವದ ಬಗ್ಗೆ ಬಹಳ ಮಂದಿ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ನಾವು ವಾದ ಮಾಡುತ್ತಿದ್ದೇವೆಯೋ, ಚರ್ಚೆ ಮಾಡುತ್ತಿದ್ದೇವೆಯೋ ಎನ್ನುವಂತಹದ್ದು ಬಹಳ ಪ್ರಮುಖವಾಗುತ್ತದೆ. ಚರ್ಚೆ ಮಾಡುತ್ತಿದ್ದೇವೆ ಎನ್ನುವುದಾದರೆ ಒಂದು ವಿಷಾದವನ್ನು ವ್ಯಕ್ತಪಡಿಸುತ್ತೇವೆ ಎಂದು ಆಡಳಿತ ಪಕ್ಷದಲ್ಲಿ ಅನುಭವ ಇರುವಂತಹ ಹಿರಿಯ ನಾಯಕರು ಹೇಳಿದರೆ, ಅದರಲ್ಲಿ ಬಹಳ ದೊಡ್ಡ ತಪ್ಪು ಏನೂ ಆಗುವುದಿಲ್ಲ. ಒಂದು ಅರ್ಥದಲ್ಲಿ ಅವರ ದೊಡ್ಡತನ ಇನ್ನು ಜಾಸ್ತಿಯಾಗುತ್ತದೆ. ಕೇವಲ ವಾದ ಮಾಡುತ್ತಿದ್ದರೆ ಹೇಗೆ? ಹೀಗೆ ನಾನು ವಾದ ಮಾಡುತ್ತೇನೆ ಎನ್ನವುದಾದರೆ ಅಲ್ಲಿ ಅಹಂ ಕೆಲಸ ಮಾಡುತ್ತಿದೆ ಎಂದು ಅರ್ಥ ಬರುತ್ತದೆ. ಚರ್ಚೆ ಮಾಡುತ್ತಿದ್ದೇವೆ ಎನ್ನುವುದಾದರೆ ಒಂದು ವೇಳೆ ನನಗೆ ಒಪ್ಪಿಗೆ ಇಲ್ಲದಿದ್ದರೂ ಕೂಡ ನಾನು ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳುವಂತಹದ್ದು ಅವರ ದೊಡ್ಡತನ ತೋರಿಸುತ್ತದೆ. ಅದರಿಂದ ಅವರು ಸಣ್ಣವರಾಗುವುದಿಲ್ಲ. ನಮ್ಮ ಉದ್ದೇಶ ಅಧಿವೇಶನ ನಡೆಯಬೇಕೆನ್ನುವುದು. ಇದರ ಬಗ್ಗೆ ಆಡಳಿತ ಪಕ್ಷಕ್ಕೆ ಹೆಚ್ಚಿನ ಜವಾಬ್ದಾರಿ ಇದೆ. ಅದನ್ನು ಅವರು ತೋರಿಸದೆ ಪ್ರತಿಯೊಂದನ್ನು ಪ್ರತಿ ಪಕ್ಷದಿಂದಲೇ ನಿರೀಕ್ಷೆ ಮಾಡುತ್ತೇವೆ. ನಾವು ಮಾಡಿದ್ದರೂ ಕೂಡ ಅದನ್ನು ಸರಿ ಎಂದು ಹೇಳಿಕೊಂಡು ವಾದವನ್ನೇ ಮುಂದುವರೆಸುತ್ತೇವೆ ಎಂದು ಹೇಳುವುದಾದರೆ ಇದು ಕೊನೆಯಾಗುವುದಿಲ್ಲ ಎನ್ನುವುದನ್ನು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ನಾನು ಸಲಹೆಯನ್ನು ಕೊಟ್ಟಿದ್ದೀನಿ. ದಯಮಾಡಿ ಎಲ್ಲರ ಸಲಹೆಯನ್ನು ತಿಳಿದುಕೊಳ್ಳಬೇಕು. ಸಲಹೆಯನ್ನು ತಿಳಿದುಕೊಂಡು ಸದನವನ್ನು ನಡೆಯುವುದಕ್ಕೆ ಅನುವು ಮಾಡಿಕೊಡಬೇಕು. ಸರ್ಕಾರಕ್ಕೂ ಹೇಳಿದ್ದೇನೆ. ಚರ್ಚೆಯೂ ಕೂಡ ಆಗಿದೆ. ಚರ್ಚೆಯಾಗಿ ಅವರು ಹೇಳಿದ್ದಾರೆ. ಇನ್ನು ಅತೀ ಗೆರೆ ಕೊರೆಯುವುದರಿಂದ ಏನು ಆಗುತ್ತದೆ ಎಂದರೆ, ತುಂಬಾ ಕಷ್ಟವಾಗುತ್ತದೆ. ಪ್ರತಿಯೊಂದಕ್ಕೂ ಗೆರೆ ಕೊರೆದರೆ ಹೇಗೆ? ಮಾನ್ಯ ಸಭಾನಾಯಕರೇ ಏನು ಹೇಳುತ್ತೀರೆಂಬುದನ್ನು ತಿಳಿಸಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಕಾರ್ಯಾಲಯದಲ್ಲಿ ನಾವು ಏನು ಮಾತನಾಡಿದ್ದೇವೆ, ನಾವು ಮಾತನಾಡಿದ ಪ್ರಕಾರ ನಾನು ಈಗಾಗಲೇ ಹೇಳಿಕೆಯನ್ನು ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ವಂದನೆಗೆ ಪರವಾಗಿ ಇದ್ದೀರೋ, ವಿರೋಧವಾಗಿ ಇದ್ದೀರೋ ಅದನ್ನು

ಸರ್ಕಾರ ಸ್ಪಷ್ಟ ಮಾಡಬೇಕೆಂದು ನಿನ್ನೆಯಿಂದಲೂ ಹೇಳುತ್ತಿದ್ದಾರೆ. ನಾವು ಪರವಾಗಿ ಇದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮತ್ತೊಂದು ಬಾರಿ ಹೇಳಿ ಎಂದರೂ ಹೇಳುತ್ತೇನೆ. ಅದಕ್ಕೆ ಸಹಕರಿಸಬೇಕಾಗಿ ಕೇಳುತ್ತೇನೆ.

**ಶ್ರೀ ಛಲವಾದಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಡತವನ್ನು ತೆಗೆಸಿ ನೋಡಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಹಠ ಹಿಡಿದು ಈ ರೀತಿ ಹೇಳಿ ಎಂದರೆ ನಾವು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಛಲವಾದಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ವಂದನಾ ನಿರ್ಣಯದ ಪರವಾಗಿ ಇರುವುದರ ಬಗ್ಗೆ ದ್ವಂದ್ವ ಇತ್ತು. ಕಾನೂನು ಸಚಿವರು ಇಲ್ಲಿಯೇ ಕುಳಿತಿದ್ದರು. ಅವರ ಮುಂದೆಯೇ ನಾನು ಹೇಳಿದ್ದೆ. ಇವರು ವಿರೋಧ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಪರವಾಗಿ ಮಾಡಿದ್ದಾರೆ. ಕಾನೂನು ಏನು ಹೇಳುತ್ತದೆ ಎಂದರೆ, ಗೌರ್ವನರ್ ಅವರು ಬಂದು ಮೊದಲನೆಯ ಸಾಲು ಹಾಗೂ ಕೊನೆಯ ಸಾಲುಗಳನ್ನು ಓದಿದ ಮೇಲೆ ಅದನ್ನು ನಾವು ಓದಿದ್ದೇವೆ ಎಂದು ಬರೆದುಕೊಳ್ಳಬಹುದು ಎಂದು ಹೇಳಿದರು. ಅದನ್ನು ನಾವು ಒಪ್ಪಿದ್ದೇವೆ. ನಾವು ಒಪ್ಪಿದ ಮೇಲೆ ನಂತರ ಗೊಂದಲ ಪ್ರಾರಂಭವಾಗಿದೆ. ಅದರಿಂದಾಗಿ ನಾನು ಕೇಳುವಂತಹದ್ದು. ಯಾರು ಅದನ್ನು ಖಂಡಿಸಿದ್ದೀರಿ, ಅವರು ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಂತಹದ್ದನ್ನು ಮಾಡುತ್ತಿದ್ದಾರೆ. ಈಗ ಒಂದು ಕೆಲಸ ಮಾಡಿ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದಕ್ಕೆ ಅವರು ವಿಷಾದ ವ್ಯಕ್ತಪಡಿಸಿದರೆ ನಮ್ಮ ಅಭ್ಯಂತರ ಏನು ಇಲ್ಲ ಎಂದು ಹೇಳಿದ್ದೇನೆ. ರೆಕಾರ್ಡ್‌ನಲ್ಲಿ ಇದೆ. ಬೇಕಾದರೆ ತೆಗೆಸಿ ನೋಡಿ. ಸರ್ಕಾರ ಏನೇ ಮಾಡಿದರೂ ವಿರೋಧ ಪಕ್ಷದವರು ಸಹಿಸಿಕೊಳ್ಳಬೇಕು ಎನ್ನುವ ವಾದ ಇದೆಯೇ?

**ಶ್ರೀ ಎ.ವಸಂತ್ ಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯದ ಮೇಲೆ ಅವರದೇ ಚರ್ಚೆ ಕೇಳುತ್ತಿದ್ದರೆ, ನಮ್ಮ ಚರ್ಚೆಯನ್ನು ಕೇಳುವವರು ಯಾರೂ ಇಲ್ಲ. ಈಗ ಸದನ ನಡೆಸುತ್ತೀರೋ, ಇಲ್ಲವೋ ಹೇಳಿ. ಬರೀ ಇದೆ ಆಯಿತು. **(ಗೊಂದಲ)** ನಮಗೂ ಅವಕಾಶ ಕೊಡಿ. ಮಾನ್ಯ ಸಭಾನಾಯಕರು ಏನು ಹೇಳಿದರು ಎನ್ನುವುದು ನಮ್ಮ ವಾದವೇ? ಈಗಾಗಲೇ ಮಾನ್ಯ ಸಭಾನಾಯಕರು ಸ್ಪಷ್ಟಪಡಿಸಿದ್ದಾರೆ. ಇದು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ . . .

**ಶ್ರೀ ಶಿವಕುಮಾರ್.ಕೆ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ನಾವು ಮೌನವಾಗಿ ಎಲ್ಲವನ್ನೂ ಕೇಳುತ್ತಿದ್ದೇವೆ. **(ಗೊಂದಲ)** ಸದನವನ್ನು ನಡೆಸಬೇಕು ಇಲ್ಲವೆಂದರೆ ಹೋಗಬೇಕು. Sitting fees ತೆಗೆದುಕೊಂಡು ಏನು ಮಾಡುತ್ತಿದ್ದೀರೆಂದು ಹೊರಗಡೆ ಜನ ನಮ್ಮನ್ನು ಉಗಿಯುತ್ತಿದ್ದಾರೆ. ಈ ರೀತಿ ಏಕೆ ಸದನವನ್ನು ನಡೆಸಬೇಕು?

**(ಗೊಂದಲ)**

**ಶ್ರೀ ಛಲವಾದಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಹೇಗೆ ಬೇಕಾದರೂ ನಡೆದುಕೊಳ್ಳಬಹುದು. ವಿರೋಧ ಪಕ್ಷದವರು ಸಹಿಸಿಕೊಳ್ಳಬೇಕು ಎನ್ನುವುದು ಅವರ ವಾದವೇ?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಬ್ಬೊಬ್ಬರು ಮಾತನಾಡಿ. ಉಳಿದವರು ಕುಳಿತುಕೊಳ್ಳಿ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ನೀವು null and void ಆಯಿತು ಎಂದ ಮೇಲೆ . . .

**ಸಭಾಪತಿಯವರು:-** ಮಾನ್ಯ ಶಿವಕುಮಾರ್ ರವರೇ ಕುಳಿತುಕೊಳ್ಳಿ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ಇದು ನಿನ್ನೆಯಿಂದ ನಡೆಯುತ್ತಿದೆ. ನೀವು null and void ಆಯಿತು ಎಂದ ಮೇಲೆ **(ಗೊಂದಲ)** ಅವರು ಕ್ಷಮೆ ಕೇಳಿದ್ದಾರೆ. ಉತ್ತರ ಪರವಾಗಿ ಇದ್ದೇವೆ ಎಂದು ಹೇಳುತ್ತಿದ್ದಾರೆ.

**ಶ್ರೀ ಎ.ವಸಂತ್ ಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ಅವಕಾಶ ಕೊಡಿ ನಾವು ಮಾತನಾಡಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಬ್ಬರು ಮಾತನಾಡಿ. ಉಳಿದವರೆಲ್ಲಾ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ತಪ್ಪು ಮಾಡದೇ ಇರುವವರು ಯಾರು ಇಲ್ಲ. ಆಕಸ್ಮಾತ್ ತಪ್ಪು ಮಾಡಿದಾಗ ನಾವು ಕೂಡ ಕ್ಷಮೆ ಕೇಳಿದ್ದೇವೆ.

**(ಗೊಂದಲ)**

**ಶ್ರೀ ಎ. ವಸಂತ್ ಕುಮಾರ್:-** ಮಾನ್ಯ ಸಭಾಪತಿಯವರೇ, ಯಾರು ತಪ್ಪು ಮಾಡಿದ್ದಾರೆ ಕೇಳಿ. ತಪ್ಪು ಮಾಡಿರುವುದು **(ಗೊಂದಲ)** ಮಾನ್ಯ ಸಭಾನಾಯಕರು ಏನು ಹೇಳಿದ್ದಾರೆ ಎಂದರೆ, ರಾಜ್ಯಪಾಲರ ಭಾಷಣದ ಮೇಲೆ ನಾವು ಏನು ಮಾತನಾಡಿಲ್ಲ. ರಾಜ್ಯಪಾಲರ ಭಾಷಣ ಮುಗಿದ ಮೇಲೆ ರಾಷ್ಟ್ರಗೀತೆಗೆ ಗೌರವ ಸಲ್ಲಿಸಬೇಕಾಗಿತ್ತು. ರಾಷ್ಟ್ರಗೀತೆಗೆ ಗೌರವ ಸಲ್ಲಿಸಬೇಕಾಗಿರುವಂತಹ ಸಂದರ್ಭದಲ್ಲಿ ಅವರು ಎದ್ದು ಹೋದರು ಎಂದು ಅವರು ಪ್ರಾರಂಭ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಜಗದೇವ್ ಗುತ್ತೇದಾರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಹೇಳಿ. ಮಾನ್ಯ ಶಿವಕುಮಾರ್ ರವರೇ ಮತ್ತು ಮಾನ್ಯ ಜಗದೇವ್ ಗುತ್ತೇದಾರ್ ರವರೇ ಕುಳಿತುಕೊಳ್ಳಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಶಿವಕುಮಾರ್ ರವರೇ, ಕುಳಿತುಕೊಳ್ಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು, ಮಾನ್ಯ ಸಭಾಧ್ಯಕ್ಷರು, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಜ್ಯಪಾಲರ ಜೊತೆಯಲ್ಲಿಯೇ ಬಂದಿದ್ದಾರೆ. ಇವರೆಲ್ಲರಿಗೂ ಸೇರಿಸಿ ಕಳುಹಿಸಿ. ಮಾನ್ಯ ರಾಜ್ಯಪಾಲರು, ಮಾನ್ಯ ಸಭಾಪತಿಯವರು, ಮಾನ್ಯ ಸಭಾಧ್ಯಕ್ಷರು ಮಾನ್ಯ ಮುಖ್ಯಮಂತ್ರಿಗಳು ಎಲ್ಲರ ಮೇಲೂ **(ಗೊಂದಲ)** ಅವರ್ಯಾರು ರಾಷ್ಟ್ರಗೀತೆ ಹೇಳದೇ ಹೋದರು ಎಂಬುದು ಅವರ ಆರೋಪವೇ?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗ . . .

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮೊದಲು ಮಾನ್ಯ ಸದಸ್ಯರುಗಳನ್ನು ಕೂರಿಸಿ.

**ಶ್ರೀ ಶಿವಕುಮಾರ್.ಕೆ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎ. ವಸಂತ್ ಕುಮಾರ್:-** ಮಾನ್ಯ ಸಭಾಪತಿಯವರೇ, . .

**ಶ್ರೀ ಸಿ.ಟಿ.ರವಿ:-** ಮಾನ್ಯ ವಸಂತ್ ಕುಮಾರ್‌ರವರೇ, ಆಯಿತು. ನಿಮ್ಮ ಮಾತಿಗೆ ಅಂಟಿಕೊಳ್ಳಿ. ನಾವು ಖಂಡನಾ ನಿರ್ಣಯವನ್ನೇ ಮಂಡಿಸಿದ್ದು ಎಂದು ಹೇಳಿ. ಅದಕ್ಕೆ ಅಂಟಿಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ, ತಮಗೆ ಬುದ್ಧಿ ಇದೆಯೇ, ಇಲ್ಲವೇ? ಒಂದು ನಿಮಿಷ ನೋಡಿ. ಕನಿಷ್ಠಪಕ್ಷ ಪೀಠಕ್ಕಾದರೂ ಗೌರವ ಕೊಡಿ. ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು. ಬರೀ ಎದ್ದು ಮಾತನಾಡುತ್ತಿದ್ದರೆ ಹೇಗೆ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ಇದೇ ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ. ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ ಮತ್ತು ಮಾನ್ಯ ಕಾನೂನು ಸಚಿವರು ಬಂದು ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಮಾತನಾಡಿದ್ದಾರೆ. ಇದೆಲ್ಲಾ ಆದ ನಂತರ ತಾವು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯ ಮಾಡಿದರು. ಮಾನ್ಯ ರಮೇಶ್‌ಬಾಬು ರವರು ಅನುಮೋದನೆ ಮಾಡಿದರು. ಇದಾದ ನಂತರ ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಮಾನ್ಯ ಉಪ ಸಭಾಪತಿಯವರು ವೇದಿಕೆ ಮೇಲೆ ಬಂದಾಗ ತಾವು ಪೀಠದಿಂದ ಹೇಳಿದ ನಿರ್ಧಾರವನ್ನೇ ಅವರು ಕೂಡ ಹೇಳಿದರು. ನಂತರ ಅವರು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮಾತನಾಡಿದರು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆಯಿತು ಬಿಡಿ. ಅದನ್ನೇ ಮತ್ತೆ ಮತ್ತೆ ಏಕೆ ಹೇಳುತ್ತೀರಿ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಆದ ಮೇಲೆ ಸನ್ಮಾನ್ಯ ಎನ್. ಎಸ್.ಬೋಜೇಗೌಡರವರು ಹೇಳಿರುವಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ತಮ್ಮ ಸಮ್ಮುಖದಲ್ಲಿ ಮಾತನಾಡಿ ಸೆಟಲ್ ಆಗಿದೆ. ಮತ್ತೆ ಅದೇ ವಿಷಯವನ್ನು ಇಟ್ಟುಕೊಂಡು ಮಾತನಾಡಿದರೆ ಹೇಗೆ? ಇವರು ಸದನವನ್ನು ನಡೆಸುವುದಕ್ಕೆ ಸಹಕಾರ ನೀಡುತ್ತಿಲ್ಲ ಎನ್ನುವುದು ಅರ್ಥವಾಗುತ್ತದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರೀತಿ ಸದನ ನಡೆಯುತ್ತಿರುವುದು ನಮಗೂ ಕೂಡ ಇಷ್ಟ ಇಲ್ಲ. ಇದರೊಳಗೂ ಕೂಡ . . .

**ಶ್ರೀ ಎ.ವಸಂತ್ ಕುಮಾರ್:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ. ಹುಚ್ಚರಂತೆ ಮಾತನಾಡುವುದು ಏನು? ಕಾಮನ್‌ಸೆನ್ಸ್ ಇರಬೇಕು. ಮಾನ್ಯ ರವಿಕುಮಾರ್‌ರವರೇ ಹೇಳಿ. ಮಾನ್ಯ ಸದಸ್ಯರೇ, ಇನ್ನೊಬ್ಬರು ಮಾತನಾಡಬೇಕಾದರೆ ಕೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಏನು ಭಾಷಣವನ್ನು ಮಾಡಿದ್ದಾರೆ. ಅದೇನು ರೆಕಾರ್ಡ್ ಆಗಿದೆ ಅದನ್ನು ತೆಗೆಸಿ ನೋಡಿ. ಏಕೆಂದರೆ, ಇದಾದ ಮೇಲೆ ರೆಕಾರ್ಡ್‌ನಲ್ಲಿ ಇರುವಂತಹದ್ದು ಸರಿ ಇಲ್ಲ. ಹಾಗಾಗಿ ರೆಕಾರ್ಡ್‌ನಲ್ಲಿ ಇರುವಂತಹದ್ದನ್ನು ತೆಗೆಯಿಸಿ. ಎರಡನೆಯದು, ನಾವು ಅನೇಕ

ಮಾನ್ಯ ಸದಸ್ಯರುಗಳು ವಿಷಾದವನ್ನು ವ್ಯಕ್ತಪಡಿಸಿದ್ದೇವೆ. ಕ್ಷಮೆಯನ್ನು ಕೇಳಸಿದ್ದೇವೆ. ತಪ್ಪು ಮಾಡದೇ ಇರುವವರು ಜಗತ್ತಿನಲ್ಲಿ ಯಾರೂ ಇಲ್ಲ. ತಪ್ಪು ಮಾಡದವನು ಯಾರು ಇದ್ದಾನೆ ಎಂದು ದೊಡ್ಡ ಹಾಡು ಇದೆ. ಅದಕ್ಕೆ ಅವರು ವಿಷಾದವನ್ನು ವ್ಯಕ್ತಪಡಿಸಲಿ. ನಾವು ಇಲ್ಲಿಗೆ ಪೂರ್ತಿಯಾಗಿ ಕೋ-ಆಪರೇಟ್ ಮಾಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ, ಮಾನ್ಯ ರಾಜ್ಯಪಾಲರ ವಿಷಯದಲ್ಲಿ ನಾವು ಒಪ್ಪಿಕೊಳ್ಳುತ್ತೇವೆ. ಭಾರತ ಸಂವಿಧಾನದ ಅನುಚ್ಛೇದ 163 (2) ರಲ್ಲಿ "ಯಾವುದೇ ವಿಷಯವು ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯಪಾಲನು ತನ್ನ ವಿವೇಚನಾನುಸಾರ ಕಾರ್ಯ ನಿರ್ವಹಿಸಬೇಕೆಂದು ಅವನನ್ನು ಅಗತ್ಯಪಡಿಸಿರುವ ವಿಷಯವೇ ಅಥವಾ ಅಲ್ಲವೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ರಾಜ್ಯಪಾಲರು ತನ್ನ ವಿವೇಚನಾನುಸಾರ ಕೈಗೊಂಡ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ರಾಜ್ಯಪಾಲರು ಕೈಗೊಂಡ ಯಾವುದೇ ಕಾರ್ಯದ ಸಿಂಧುತ್ವವನ್ನು ಅವನು ತನ್ನ ವಿವೇಚನಾನುಸಾರವಾಗಿ ಕಾರ್ಯ ನಿರ್ವಹಿಸಬೇಕಾಗಿತ್ತು ಅಥವಾ ಕಾರ್ಯ ನಿರ್ವಹಿಸಬಾರದಾಗಿತ್ತು ಎಂಬ ಕಾರಣದ ಮೇಲೆ ಪ್ರಶ್ನಿಸತಕ್ಕುದಲ್ಲ" ಎಂದು ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ಅದೇ ರೀತಿ ಭಾರತ ಸಂವಿಧಾನದ ಅನುಚ್ಛೇದ 51 ರಲ್ಲಿ "ಮೂಲಭೂತ ಕರ್ತವ್ಯಗಳು: ಕೆಳಕಂಡ ಕರ್ತವ್ಯಗಳನ್ನು ಪಾಲಿಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿರತಕ್ಕದ್ದು:- (ಎ) ಸಂವಿಧಾನವನ್ನು ಅನುಸರಿಸುವುದು ಹಾಗೂ ಅದರ ಆದರ್ಶಗಳನ್ನು, ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು; (ಬಿ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಗೌರವಿಸುವುದು ಮತ್ತು ಅನುಸರಿಸುವುದು" ಎಂದು fundamental duties ಹೇಳುತ್ತದೆ. ಈಗ Governor ಆದರೆ ಏನು ಮಾಡುತ್ತೀರಿ ಸ್ವಾಮಿ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಇದನ್ನು ಯಾರು ಹೇಳದರು ಎಂದು ವಿವಾದ ಇಲ್ಲ. ನಿಮ್ಮ ಆರೋಪವನ್ನು ಮಾನ್ಯ ರಾಜ್ಯಪಾಲರ ಮೇಲೆ ಏಕೆ ಹೊರೆಸುತ್ತೀರಿ? ಮಾನ್ಯ ಮುಖ್ಯಮಂತ್ರಿಗಳ ಮೇಲೆ ಹೊರೆಸಿ. ಮಾನ್ಯ ಸಭಾಪತಿಯವರ ಮೇಲೆ ಹೊರೆಸಿ. ಮಾನ್ಯ ಸಭಾಧ್ಯಕ್ಷರ ಮೇಲೆ ಹೊರೆಸಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವರು ಕೂಗಾಡಿಕೊಂಡರೆ ಏನು ಪ್ರಯೋಜನವಾಗುವುದಿಲ್ಲ. **(ಗೊಂದಲ)** ಮಾನ್ಯ ರಾಜ್ಯಪಾಲರು . . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಅವರದ್ದು ಮುಗಿಯಲಿ. ಆಮೇಲೆ ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಛಲವಾದಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಮಾತನಾಡುವುದನ್ನು ಇನ್ನು ಮುಗಿಸಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ಹಾಕುವವರನ್ನು ಕೇಳಲಿ, ರಾಷ್ಟ್ರಗೀತೆಯನ್ನು ಹಾಕಬೇಕಾಗಿರುವವರು ಮಾನ್ಯ ರಾಜ್ಯಪಾಲರೇ?

**(ಗೊಂದಲ)**

**ಶ್ರೀ ಛಲವಾದಿ ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ರಾಜ್ಯಪಾಲರು ಸಂವಿಧಾನದ ಹೆಡ್. ಇಲ್ಲಿ ನಡೆದಿರುವಂತಹದ್ದು ಸಂವಿಧಾನಕ್ಕೆ ಅಪಚಾರ. ಅವರು ಭಾರತ ಸಂವಿಧಾನದ ಪುಸ್ತಕವನ್ನು ಓದುವ ಯೋಗ್ಯತೆಯನ್ನು ಕಳೆದುಕೊಂಡಿದ್ದಾರೆ.

(ಮುಂದು)

(56) 28.01.2026 12.40 ಹೆಚ್‌ವಿ.ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಅವರು ಸಂವಿಧಾನವನ್ನು ಓದಬಾರದು. ಅವರಿಗೆ ಸಂವಿಧಾನವನ್ನು ಮುಟ್ಟುವುದಕ್ಕೆ ಯೋಗ್ಯತೆ ಇಲ್ಲ. ಸಂವಿಧಾನಬದ್ಧವಾಗಿರುವ ಸದನದಲ್ಲಿ ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಯೋಗ್ಯತೆಯ ಬಗ್ಗೆ ಮಾತನಾಡುವ ಅವರಿಗೆ ವಿರೋಧ ಪಕ್ಷ ಏನು ಮಾಡಿತ್ತು ಎನ್ನುವುದನ್ನು ನಾನು ಹೇಳಬೇಕಾಗುತ್ತದೆ. 1999ರಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಕಾಲದಲ್ಲಿ ಸಂವಿಧಾನವನ್ನು review ಮಾಡಬೇಕೆಂದು

ವೆಂಕಟಾಚಲಯ್ಯ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ......(ಗೊಂದಲ) ಆಗ ಇವರುಗಳು ಎಲ್ಲಿಗೆ ಹೋಗಿದ್ದರು. ಯೋಗ್ಯತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಇಂತಹ ಅಯೋಗ್ಯರನ್ನು ಇಟ್ಟುಕೊಂಡಿರುವುದಕ್ಕೆ ನಮ್ಮ ದೇಶ ಈ ರೀತಿ ಆಗಿರುವುದು.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾಲಿಗೆಯ ಮೇಲೆ ಹಿಡಿತ ಇರಬೇಕಾಗುತ್ತದೆ. ಯೋಗ್ಯತೆಯ ಬಗ್ಗೆ ಮಾತನಾಡುವವರು 1999ರಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಸಂವಿಧಾನವನ್ನು review ಮಾಡಬೇಕೆಂದು ಹೊರಟಾಗ, ಇವರುಗಳು ಎಲ್ಲಿಗೆ ಹೋಗಿದ್ದರು?.... ಚಡ್ಡಿ ಗ್ಯಾಂಗ್‌ನವರಿಂದ ನಾನು ಕಲಿತುಕೊಳ್ಳಬೇಕಾಗಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ನಾಲಿಗೆ ಹಿಡಿತ ಇರುವುದಕ್ಕೆ ನಾವು ಮಾತನಾಡುತ್ತಿರುವುದು. ನಮ್ಮ ಚಡ್ಡಿ ಬಗ್ಗೆ ನಮಗೆ ಗೊತ್ತಿದೆ. ಚಡ್ಡಿ ಇಲ್ಲದವರು ಅವರು....

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಅವರದ್ದು ವರ್ಷಕ್ಕೊಂದು ಪಾರ್ಟಿ, ದಿವಸಕ್ಕೊಂದು ನಾಯಕರು... ಗೋಸುಂಬೆ ನಾಯಕರುಗಳು..... ನಾನು ಗೋಸುಂಬೆ ಅಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರಂತಹ ಮೋಸಗಾರರು, ವಂಚನೆಕೋರರು ಯಾರೂ ಇರಲು ಸಾಧ್ಯವಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎ.ವಸಂತಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಬಗ್ಗೆ ಮಾತನಾಡುವ ನೈತಿಕತೆ ವಿರೋಧ ಪಕ್ಷದವರಿಗೆ ಇಲ್ಲ. ಅವರು ಸಂವಿಧಾನವನ್ನು ಸುಟ್ಟವರು ಮತ್ತು ಸಂವಿಧಾನಕ್ಕೆ ಮಾನ್ಯತೆ ಕೊಡದಿರುವವರು.

(ಗೊಂದಲ)

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಪ್ರಧಾನಮಂತ್ರಿಗಳ ಸ್ಥಾನವನ್ನು ಕೊಡಲಿಲ್ಲ.

**ಸಭಾಪತಿಯವರು:–** ಇದು ಸದನವೋ ಅಥವಾ ಏನು? ನಿಮ್ಮ ಊರಿನ ಮುನಿಸಿಪಾಲಿಟಿಯಲ್ಲಿ ಈ ರೀತಿ ಮಾತನಾಡುತ್ತೀರಾ? ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ನೀವು ಮಾತನಾಡುವುದಕ್ಕೆ ತಾಳ ತಂತಿ ಏನಾದರು ಇದೆಯೋ ಇಲ್ಲವೋ? ತಾವೆಲ್ಲರೂ ಮೇಲ್ಮನೆಯ ಶಾಸಕರಾಗಿದ್ದೀರಿ, ಘನತೆ–ಗೌರವ ಇರಬೇಕಾಗುತ್ತದೆ. ಏನೂ ಕಲಿಯದಿದ್ದರೂ ಕೊನೆಯ ಪಕ್ಷ ಘನತೆ–ಗೌರವವನ್ನು ಕಲಿಯಬೇಕು. ಮಾನ್ಯ ರಮೇಶ್ ಬಾಬುರವರೇ ತಾವು ಮಾತನಾಡಿ.

**ಶ್ರೀ ರಮೇಶ್ ಬಾಬು(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಪ್ರತಾಪಸಿಂಹ ನಾಯಕ್‌ರವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು.

**ಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೇ, ನಿಮ್ಮ ವಿಚಾರವನ್ನು ಹೇಳಿ. ಪುನಃ ಬೆಂಕಿ ಹಚ್ಚಬೇಡಿ.

**ಶ್ರೀ ರಮೇಶ್ ಬಾಬು:–** ಸನ್ಮಾನ್ಯ ಸಭಾಪತಿಯವರೇ, ನನ್ನ ವಿಚಾರಕ್ಕೂ ಬರುತ್ತೇನೆ. ಮಾನ್ಯ ಉಪ ಸಭಾಪತಿಯವರು ಮತ್ತು ತಾವು ಇಬ್ಬರೂ ಹೇಳಿದ್ದೀರಿ, ಸದನದಲ್ಲಿ ತಮಗೆ ಸಂಪೂರ್ಣವಾಗಿರುವ ಅಧಿಕಾರವಿದೆ. ಘನತೆವೆತ್ತ ರಾಜ್ಯಪಾಲರಿಗೆ ಸಂಬಂಧಪಟ್ಟಂತೆ ಇಂತಹ ಚರ್ಚೆಯಾಗಿರುವುದು ಇದು ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ. 1956ನೇ ಇಸವಿಯಲ್ಲಿಯೇ ಈ ಸದನದಲ್ಲಿ ಚರ್ಚೆಯಾಗಿದೆ. ಕರ್ನಾಟಕ ರಾಜ್ಯದ ಮೊಟ್ಟ ಮೊದಲ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು.......

**ಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೇ, ಘನತೆವೆತ್ತ ರಾಜ್ಯಪಾಲರ ಬಗ್ಗೆ ಮಾತನಾಡುವುದಕ್ಕೆ ಎರಡು ರೀತಿಗಳಿವೆ. ಆ ಎರಡು ರೀತಿಗಳು ಬೇರೆಬೇರೆಯಾಗಿವೆ.

**ಶ್ರೀ ರಮೇಶ್ ಬಾಬು:–** ಸನ್ಮಾನ್ಯ ಸಭಾಪತಿಯವರೇ, ಆರೋಗ್ಯಕರವಾದ ಚರ್ಚೆಯ ದೃಷ್ಟಿಯಿಂದ ನಾನು ಇದನ್ನು ಉಲ್ಲೇಖ ಮಾಡುತ್ತಿದ್ದೇನೆ. 1956ನೇ ಇಸವಿಯಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ರಾಜ್ಯಪಾಲರಾಗಿದ್ದ ಕಾಲದಲ್ಲಿಯೂ ಇದೇ ಪರಿಸ್ಥಿತಿಯಾಗಿದೆ. ಅವತ್ತು ಯಾರೂ ಸಹ boycott ಮಾಡಿ ಹೋಗಿಲ್ಲ. ವಿರೋಧ ಪಕ್ಷದವರು ವಿರೋಧ ಮಾಡಿಲ್ಲ. ತಮ್ಮ ಅಭಿಪ್ರಾಯಗಳನ್ನು ಮಂಡನೆ ಮಾಡಿದ್ದಾರೆ. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದಂತಹ ಭಾಷಣಕ್ಕೆ ವಂದನಾ ನಿರ್ಣಯವನ್ನು ಸಲ್ಲಿಸುವಂತಹ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರು

ಏನಾದರೂ ತಿದ್ದುಪಡಿಗಳು, ಸಲಹೆಗಳು ಇದ್ದರೆ ಅದನ್ನು ಹೇಳಬಹುದಾಗಿದೆ. ಅದನ್ನು ಬಿಟ್ಟು ಬೇರೆಬೇರೆ ಅಸಂವಿಧಾನಾತ್ಮಕ ಪದಗಳನ್ನು ಬಳಕೆ ಮಾಡುವುದು ಮತ್ತು ಪ್ರಚೋದಿಸುವುದು ಬೇಡ. ತಮಗೆ ಸಂಪೂರ್ಣವಾಗಿರುವ ಅಧಿಕಾರವಿದೆ. ನಾನು ಆಡಳಿತ ಪಕ್ಷದ ಪರವಾಗಿ ನನ್ನ ವಿನಂತಿ ಏನೆಂದರೆ, ಸದನದಲ್ಲಿ ಯಾರು ತಕರಾರು ಮಾಡುತ್ತಾರೆ, ಯಾರು ವಿರೋಧ ಮಾಡುತ್ತಾರೆ ಅವರನ್ನು ಸದನದಿಂದ ಆಚೆ ಹಾಕಿ, ಸದನ ನಡೆಯುವುದಕ್ಕೆ ತೊಂದರೆ ಮಾಡುವುದು, ಅಸಂಸದೀಯ ಪದಗಳನ್ನು ಬಳಕೆ ಮಾಡುವುದು, “ಅಯೋಗ್ಯ” ಎನ್ನುವ ಪದ ಬಳಕೆ ಮಾಡುವುದು ಈ ರೀತಿಯ ಬೆಳವಣಿಗೆಗಳು ಒಳೆಯದಲ್ಲ, ಅವರನ್ನು ಸದನದಿಂದ ಆಚೆ ಹಾಕಿ.

(ಗೊಂದಲ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಬಾಬುರವರು ಹೇಳುತ್ತಿರುವುದನ್ನು ನಾನು ಒಪ್ಪುತ್ತೇನೆ. ಯಾರು ಘನತೆವೆತ್ತ ರಾಜ್ಯಪಾಲರಿಗೆ ಅಡ್ಡಿಪಡಿಸಿದರು ಅವರನ್ನು ಮೊದಲು ಸದನದಿಂದ ಹೊರಗೆ ಹಾಕಿ. ಅವರನ್ನು ಹೊರಗೆ ಹಾಕಿ.

(ಗೊಂದಲ)

**ಶ್ರೀ ರಮೇಶ್ ಬಾಬು:-** ಸನ್ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರಗೆ ಹಾಕಬೇಕು. ಯಾರು “ಅಯೋಗ್ಯ” ಎನ್ನುವ ಪದ ಬಳಕೆ ಮಾಡಿದ್ದಾರೆ ಅವರನ್ನು ಮೊದಲು ಸದನದಿಂದ ಹೊರಗೆ ಹಾಕಬೇಕು. ಅಸಂಸದೀಯ ಪದ ಬಳಕೆ ಮಾಡಿರುವ ಅವರನ್ನು ಮೊದಲು ಹೊರಗೆ ಹಾಕಬೇಕು.

(ಗೊಂದಲ)

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಯಾರು ಘನತೆವೆತ್ತ ರಾಜ್ಯಪಾಲರಿಗೆ ವಿರೋಧ ಮಾಡಿದ್ದಾರೆ ಅವರನ್ನು ಹೊರಗೆ ಹಾಕಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಇಲ್ಲಿ ಎಲ್ಲರೂ ಪಂಡಿತರೇ ಇದ್ದೀರಿ ಕುಳಿತುಕೊಳ್ಳಿ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕಿಂತ ದೊಡ್ಡವರು ಯಾರೂ ಇಲ್ಲ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿ, ನಾನು ನಿಮ್ಮನ್ನು “ಪಂಡಿತ” ಎಂದು ಒಪ್ಪಿಕೊಂಡಿದ್ದೇನೆ. ತಾವು ಸಂವಿಧಾನಕ್ಕಿಂತ ದೊಡ್ಡವರು, ಕುಳಿತುಕೊಳ್ಳಿ. ನಾನು ಬಹಳ ವರ್ಷದಿಂದ ಕಲಿಯುತ್ತಿದ್ದೇನೆ. ನಿಮ್ಮಷ್ಟು ಕಲಿಯುವುದಕ್ಕೆ ಆಗಲಿಲ್ಲ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಯಾರೂ ಸಂವಿಧಾನಕ್ಕಿಂತ ದೊಡ್ಡವರಿಲ್ಲ. ಸಂವಿಧಾನವೇ ದೊಡ್ಡದ್ದು. ಕೆಲವರು ಹಾಗೆ ಭಾವಿಸಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ‘ನಾವು above the Constitution’ ಎಂದು ಕೆಲವರು ಭಾವಿಸಿದ್ದರು, ಮಣ್ಣಲ್ಲಿ ಮಣ್ಣಾಗಿ ಹೋದರು.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ತಾವು ದೆಹಲಿಯಲ್ಲಿ ಆ ಹುದ್ದೆ ಈ ಹುದ್ದೆಗಳಲ್ಲಿ ಕೆಲಸ ಮಾಡಿರುವವರು. ಇಲ್ಲಿ ಕನಿಷ್ಠ ಪಕ್ಷ ಸಭಾಪತಿಯವರು ಹೇಳುವಂತಹ ಮಾತನ್ನು ಕೇಳುವಂತಹ ಸೌಜನ್ಯವಿಲ್ಲ ನಿಮಗೆ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮಾತುಗಳನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಎಲ್ಲಿ ಕೇಳುತ್ತಿದ್ದೀರಿ? ನಿಮ್ಮ ಮಾತುಗಳನ್ನೇ ಆಡುತ್ತಿದ್ದೀರಿ. ನಾನು ಮತ್ತೊಮ್ಮೆ ತಮ್ಮೆಲ್ಲರ ಗಮನಕ್ಕೆ ತರಬಯಸುವುದೇನೆಂದರೆ, "ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಯಾವುದೇ ನಡವಳಿಕೆಯನ್ನು ಕುರಿತು ಯಾವುದೇ ನ್ಯಾಯಾಲಯದಲ್ಲಿ ಆರೋಪಿಸತಕ್ಕುದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯನ್ನಾಗಿ ಮಾಡುವ ಉದ್ದೇಶದಿಂದ ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಹೆಸರನ್ನು ಬಳಸತಕ್ಕದ್ದಲ್ಲ." ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಆದರೂ ಸಹ ತಾವುಗಳು ಪುನಃ ಅವರ ಹೆಸರನ್ನು ಬಳಸುತ್ತಿದ್ದರೆ ಅದರ ಅರ್ಥವೇನು? ಈ ಪೀಠಕ್ಕೆ ತಾವು ಗೌರವ ಕೊಡದಿದ್ದರೆ ಹೇಗೆ?

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಬಳಸಿ ಆಗಿದೆ. ಅದಕ್ಕೆ ತಾವು ಏನು ಮಾಡುತ್ತೀರಿ?

**ಸಭಾಪತಿಯವರು:-** ಅದನ್ನು ಕ್ಲೋಸ್ ಮಾಡಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಎಲ್ಲಿ ಕ್ಲೋಸ್ ಮಾಡಿದ್ದೀರಿ? ಅದು ಕಡತದಲ್ಲಿ ಇದೆ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಅದನ್ನು ಕಡತದಿಂದ ತೆಗೆದು ಹಾಕುವುದರ ಜೊತೆಗೆ, ಅವರು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ತಾವು ಏನು ಆದೇಶವನ್ನು ಮಾಡಿದ್ದೀರಿ ಅದನ್ನು ನಾವೆಲ್ಲರೂ ಒಪ್ಪುತ್ತೇವೆ. ಅದು ಬೇರೆ ವಿಚಾರ. ಇಲ್ಲಿ ಕಡತದಲ್ಲಿ **[XXX]** ಎಂದು ಹೇಳಿರುವುದನ್ನು ಕಡತದಿಂದ ತೆಗೆಯಬೇಕು ಮತ್ತು ವಿಷಾದ ವ್ಯಕ್ತಪಡಿಸಬೇಕು, ಅಷ್ಟೇ ನಮಗೆ ಬೇಕಾಗಿರುವುದು. ಇದು ಆದ ಮೇಲೆ ಮತ್ತೊಂದು ವಿಚಾರವಿದೆ. ಅದರ ಬಗ್ಗೆ ಅನಂತರ ಮಾತನಾಡುತ್ತೇನೆ.

**ಸಭಾಪತಿಯವರು:-** ಕಾರ್ಯದರ್ಶಿಯವರೇ, ಆ ಕಡತವನ್ನು ಆಮೇಲೆ ಮಂಡಿಸಿ. ಆಮೇಲೆ ನನಗೆ ಕಡತದ ವಿವರವನ್ನು ಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಆ ಕಡತದ ಪ್ರತಿ ನನ್ನ ಬಳಿಯೇ ಇದೆ. ತಮ್ಮ ಗಮನಕ್ಕೆ ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ. ತಾವು ಈಗ ಒಂದು ವಿಚಾರವನ್ನು ಕ್ಲೋಸ್ ಮಾಡಿದ್ದೀರಿ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಅಲ್ಲಿ ಮಾತನಾಡಿ ಬಂದು ಇಲ್ಲಿ ಮತ್ತೇ ಉಲ್ಟಾ ಹೊಡೆಯುತ್ತಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಪೀಠದ ಸಹಾಯಕ್ಕೆ ಬರುತ್ತಿದ್ದೇನೆ. ಈಗ ಒಂದು ವಿಚಾರದ ಬಗ್ಗೆ ಅಂತಿಮ ಹಂತಕ್ಕೆ ಬರಲಾಗುತ್ತಿದೆ. ಮಾನ್ಯ ಎನ್.ರವಿಕುಮಾರ್‌ರವರು ಸಹ ಅದೇ ಮಾತನ್ನು ಹೇಳಿದ್ದಾರೆ. ಎಲ್ಲರದು ಅದೇ ಅಭಿಪ್ರಾಯವಾಗಿದೆ. ಅವರುಗಳು ಸಹ ಹೇಳಿಯಾಗಿದೆ. ಕಡತದಲ್ಲಿ ಬಂದಿರುವುದಕ್ಕೆ ಅಂತ್ಯ ಹಾಡಬೇಕಾಗಿದೆ. Very first word, "ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ……." ಎಂದು ರಾಜ್ಯಪಾಲರ ಹೆಸರನ್ನು ಉಲ್ಲೇಖಿಸಿ ಚರ್ಚೆ ಮುಂದುವರೆದಿದೆ. ಅದರಲ್ಲಿ "ಖಂಡಿಸುತ್ತೇವೆ" ಎನ್ನುವ ಪದ ಬಂದಿದೆ. ಅದನ್ನು ಕ್ಲೋಸ್ ಮಾಡಬೇಕಾಗಿದೆ. ಅದನ್ನು ಕ್ಲೋಸ್ ಮಾಡಿದರೆ ವಂದನಾ ನಿರ್ಣಯಕ್ಕೊಂದು ಅರ್ಥ ಬರುತ್ತದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನನ್ನ ಛೇಂಬರ್‌ನಲ್ಲಿ ತಾವು ಏನು ಮಾತನಾಡಿದ್ದೀರಿ? ಈ ಸದನಕ್ಕೆ ನಾನು ಹೇಳುವುದು ಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಭಾನಾಯಕರು ಮತ್ತು ತಮ್ಮನ್ನು ಕರೆದು ಮಾತನಾಡಿದಾಗ, ನೀವು ಅವರು ವಿರೋಧ ಮಾಡಿದ್ದಾರೆಂದು ಹೇಳಿದ್ದೀರಿ, ಅವರು "ವಂದನೆ" ಗೆ ಸಹಮತವಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅವರು ಸಹಮತವಿದೆ ಎಂದು ಹೇಳಿದ ಮೇಲೆ ಮುಗಿತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದಾರೆ. ಆದರೆ, ವಿಧಾನ ಪರಿಷತ್ತು ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ಆ ಕಡತ ಇರುತ್ತದೆ. ಆ ಕಡತದಲ್ಲಿ ಇರುವಂತಹ ವಿಚಾರವನ್ನು ತೆಗೆದು ಹಾಕಬೇಕು. ಆ ಕಡತವನ್ನು ವಿತ್‌ಡ್ರಾ ಮಾಡಬೇಕು.

**ಸಭಾಪತಿಯವರು:-** ಲೆಟರ್ ಕೊಡಿ ನಾನು ಅದನ್ನು ನೋಡುತ್ತೇನೆ. ಅಧಿಕೃತವಾಗಿ ಲೆಟರ್ ಕೊಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ತಾವು ಆ ಪೀಠದಿಂದ ಒಂದು ಮಾತು "ನಾನು ತೆಗೆಸುತ್ತೇನೆ" ಎಂದು ಹೇಳಿ ತೆಗೆಯುವುದಕ್ಕೆ ಹೇಳಿ. ಅಲ್ಲಿಗೆ ಇದು ಮುಗಿಯುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಸನ್ಮಾನ್ಯ ಸಭಾಪತಿಯವರೇ, ತಾವು ಇದಕ್ಕೆ ಲೆಟರ್ ಕೇಳಬಾರದು. ಸನ್ಮಾನ್ಯ ಸಭಾಪತಿಯವರೇ, ನಮ್ಮ ಊರಿನ ಕಡೆ ದೇವರು ಬಂದಾಗ ದೆವ್ವ ಬಂದಾಗ ಬೇರೆಬೇರೆ ರೀತಿ ಮಾತನಾಡುತ್ತದೆ. ಆಮೇಲೆ ಮಾತನಾಡೇ ಇಲ್ಲವೆಂದು ಹೇಳುತ್ತದೆ. ಆ ರೀತಿ ಇವರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸದನ ನಡೆಸಬಾರದೆಂದು ಇವರು ತೀರ್ಮಾನ ಮಾಡಿಕೊಂಡು ಬಂದಿದ್ದಾರೆ. ತಾವು ಒಳಗೆ ಕರೆದು ಮಾತನಾಡಿದರೂ ಅಷ್ಟೇ, ಹೊರಗೆ ಕರೆದು ಮಾತನಾಡಿದರೂ ಅಷ್ಟೇ, ಸದನ ನಡೆಯಬಾರದೆಂದು ಇವರು ಈ ರೀತಿ ಮಾಡುತ್ತಿದ್ದಾರೆ. ತಾವು ಎಲ್ಲರನ್ನು ಕರೆದು ಮಾತನಾಡುತ್ತೀರಿ, ಅವರು ಯಾವುದನ್ನೂ ಕೇಳುತ್ತಿಲ್ಲ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಸದನ ಕರೆದಿರುವುದೇ ಸದನವನ್ನು ನಡೆಸಬಾರದೆಂದು. ಸದನ ಕರೆಯುವಂತಹ ತುರ್ತು ಅವರಿಗೆ ಏನಿತ್ತು? ಇದೇ ಮಾಡುವುದಕ್ಕಾ?

**ಸಭಾಪತಿಯವರು:–** ಯಾರಾದರು ಕುಳಿತುಕೊಂಡು ಇದಕ್ಕೆ ಸಮಾಧಾನವನ್ನು ಹುಡುಕುವಂತಹ ಕೆಲಸವನ್ನು ಮಾಡಿ, ಬೆಂಕಿ ಹಚ್ಚುವಂತಹ ಕೆಲಸವನ್ನು ಮಾಡಬೇಡಿ.

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಬಾಬುರವರು ಮಾತನಾಡುತ್ತಾ, ಹಳೆಯ ವಿಚಾರಗಳನ್ನು ಉಲ್ಲೇಖ ಮಾಡಿದ್ದಾರೆ. **[XXX]** ಎನ್ನುವ ಮಾತು ಕಡತದಲ್ಲಿ ಇದ್ದರೆ, ನಾಳೆ, 5–10 ವರ್ಷಗಳು ಕಳೆದ ಮೇಲೆ ಕಡತದಲ್ಲಿರುವ ವಿಚಾರವನ್ನು ಉಲ್ಲೇಖ ಮಾಡಲಾಗುತ್ತದೆ. ಆದ್ದರಿಂದ ಆ ಪದಗಳನ್ನು ಕಡತದಿಂದ ತೆಗೆಯುವಂತಹ ತೀರ್ಮಾನ ಪೀಠದಿಂದ ಆದರೆ, ಆಗ

ಸರಿ ಹೋಗುತ್ತದೆ. ಇದು ಮೊದಲನೆಯ ಅಂಶವಾಗಿದೆ. ಎರಡನೆಯದಾಗಿ, ಪದೇಪದೇ ರಾಷ್ಟ್ರಗೀತೆಗೆ ಅಗೌರವವಾಗಿದೆ ಎನ್ನುವ ಮಾತನ್ನು ಹೇಳುತ್ತಲೇ ಇದ್ದಾರೆ.

(ಮುಂದು)

(57) 28.1.2026 12.50 : ಪಿಕೆಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್ (ಮುಂದು)**

**(ಗೊಂದಲ)**

ಮಾನ್ಯ ಸಭಾಪತಿಗಳೆ, ಆಗ ನಾವು ರಾಷ್ಟ್ರಗೀತೆಯನ್ನು ಅಲ್ಲಿ ಕೇಳಲಿಲ್ಲ. ಮಾನ್ಯ ರಾಜ್ಯಪಾಲರು ಜೈ ಹಿಂದ್ ಎಂದು ಹೇಳಿದ ಮೇಲೆ ರಾಷ್ಟ್ರಗೀತೆಯನ್ನು ಯಾರು ಹಾಕಬೇಕಿತ್ತು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಇದು ಸರ್ಕಾರ ಮಾಡಿರುವ ತಪ್ಪಾಗಿದೆ. ರಾಷ್ಟ್ರಗೀತೆಯನ್ನೇ ಹಾಕಲಿಲ್ಲ. ಹೀಗಿರುವಾಗ ರಾಷ್ಟ್ರಗೀತೆಗೆ ಹೇಗೆ ಅಪಚಾರವಾದಂತಾಗುತ್ತದೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ರಾಷ್ಟ್ರಗೀತೆಯನ್ನು ಹಾಕಿಸಬೇಕಾದುದು ಸರ್ಕಾರದ ಜವಾಬ್ದಾರಿಯಲ್ಲ. ರಾಷ್ಟ್ರಗೀತೆಯನ್ನು ಹಾಕಿಸಬೇಕಾದವರು ಯಾರು ಎಂದು ಮಾನ್ಯ ಸಭಾಪತಿಯವರು ಹೇಳಬೇಕು. ವಿರೋಧ ಪಕ್ಷದವರು, ಇದು ಸರ್ಕಾರದ ತಪ್ಪು ಎಂದು ಹೇಳುತ್ತಿದ್ದಾರೆ. ಅದು ಸರ್ಕಾರದ ತಪ್ಪಲ್ಲ. ಮಾನ್ಯ ಸಭಾಪತಿಗಳೇ ತಾವು ಇದರ ಬಗ್ಗೆ ಹೇಳಬೇಕು. ರಾಷ್ಟ್ರಗೀತೆ ಹಾಕದೇ ಇದ್ದುದಕ್ಕೆ ಯಾರು ಜವಾಬ್ದಾರರು ಎಂದು ಹೇಳಬೇಕು. ರಾಷ್ಟ್ರಗೀತೆಯನ್ನು ಹಾಕಿಸುವುದು ಸರ್ಕಾರದ ಜವಾಬ್ದಾರಿಯಲ್ಲ.

**(ಗೊಂದಲ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಗಳೆ, ಮಾನ್ಯ ಅರುಣ್‌ರವರು ಹೇಳಿರುವುದಕ್ಕೆ ಒಂದು ಸ್ಪಷ್ಟೀಕರಣ ಕೊಡಬಯಸುತ್ತೇನೆ. ಹಿಂದಿನ ದಾಖಲೆಗಳನ್ನು ಯಾರೂ ಕೂಡ ತೆಗೆದಿಲ್ಲ. ಹಿಂದಿನ ದಾಖಲೆಗಳು ಹಾಗೆಯೇ ಉಳಿದುಕೊಂಡಿವೆ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಗಳೆ, ರಾಷ್ಟ್ರಗೀತೆ ಹಾಕಿ, ಅದು ನಡೆಯುತ್ತಿರುವಾಗ ಮಧ್ಯದಲ್ಲಿ ಎದ್ದು ಹೋಗಿದ್ದರೆ ಅದು ಅಗೌರವ ಆಗುತ್ತಿತ್ತು. ರಾಜ್ಯಪಾಲರು ಅಲ್ಲೇ ನಿಂತಿದ್ದರು. ರಾಷ್ಟ್ರಗೀತೆಯನ್ನು ಪ್ಲೇ ಮಾಡುವಂಥದ್ದು ಅವರ ಹತ್ತಿರ ಇರಲಿಲ್ಲ.

**ಶ್ರೀ ರಮೇಶ್ ಬಾಬು:–** ಅವರು ನಿಂತಿದ್ದರೋ ಅಥವಾ ಎದ್ದು ಹೋಗಿದ್ದರೋ ಎನ್ನುವುದನ್ನು ಇಡೀ ದೇಶ ನೋಡಿದೆ. ನೀವು ಸರ್ಟಿಫಿಕೇಟ್ ಕೊಡುವುದು ಬೇಡ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ರಾಜ್ಯಪಾಲರು ನಿರ್ಗಮಿಸಬೇಕಾದರೆ ಇಬ್ಬರು ಸದಸ್ಯರು ಅವರಿಗೆ ಅಡ್ಡ ಬಂದರು . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಗಳೆ, ಅವರು ರಾಜ್ಯ ಮುಖ್ಯಸ್ಥರಾಗಿರುತ್ತಾರೆ. ಅವರ ನಡೆ ಸಂವಿಧಾನ ವಿರೋಧಿಯಾಗಿದೆ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಗಳೆ, ರಾಜ್ಯಪಾಲರು ನಿರ್ಗಮಿಸಬೇಕಾದರೆ ನಮ್ಮ ಮನೆಯ ಗೌರವಾನ್ವಿತ ಇಬ್ಬರು ಸದಸ್ಯರು ಅವರಿಗೆ ಅಡ್ಡ ಹೋದರು. ಅವರ ಬೆನ್ನು ಹತ್ತಿ ಅಡ್ಡ ನಿಂತುಕೊಂಡರು, ಅಡ್ಡ ಹಾಕಿದರು; ಬೆರಳು ತೋರಿಸಿದರು. ಅದನ್ನು ತಾವು ನೀತಿ ನಿರೂಪಣಾ ಸಮಿತಿಗೆ . . . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ರಾಷ್ಟ್ರಗೀತೆಗೆ ಅಪಮಾನ ಮಾಡಿದವರನ್ನು ಅಡ್ಡ ಹಾಕುವುದಲ್ಲ; ನಾವು ಏನು ಬೇಕಾದರೂ ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ನೀತಿ ನಿರೂಪಣಾ ಸಮಿತಿಗೆ ರೆಫರ್ ಮಾಡಿದ್ದೀರಿ. ಆ ಆರೋಪಿಯನ್ನು ಇಲ್ಲಿ ಮಾತನಾಡುವುದಕ್ಕೆ ಬಿಡಬಾರದು.

**(ಗೊಂದಲ)**

**(ಈ ಹಂತದಲ್ಲಿ ಬಾವಿಯೊಳಗೆ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್‌ರವರು ಘೋಷಣೆ ಕೂಗುತ್ತಿದ್ದರು.)**

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಬಾವಿಯೊಳಗೆ ನಿಂತು ಘೋಷಣೆ ಕೂಗುವುದಕ್ಕೆ ನಿಯಮಗಳಲ್ಲಿ ಇದೆಯೇ?

**(ಗೊಂದಲ)**

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಈ ಎರಡು ದಿನಗಳಿಂದ ನಡೆಯುತ್ತಿರುವ ವಿದ್ಯಮಾನವನ್ನು ನೋಡುತ್ತಿದ್ದರೆ, ಸದನ ನಡೆಸುವಂಥದ್ದು ವಿರೋಧ ಪಕ್ಷದ ನಾಯಕರಿಗೆ ಮತ್ತು

ಸದಸ್ಯರಿಗೆ ಇಷ್ಟ ಇಲ್ಲ ಎನ್ನುವುದು ಗೊತ್ತಾಗುತ್ತಿದೆ. ಆರ್ಟಿಕಲ್ 176 ಪ್ರಕಾರ ಮಾನ್ಯ ರಾಜ್ಯಪಾಲರು ಅವರ ಕರ್ತವ್ಯವನ್ನು ಮಾಡಬೇಕಾಗಿತ್ತು. ಅವರ ಬಗ್ಗೆ ನಾವು ಟೀಕೆ-ಟಿಪ್ಪಣಿ ಮಾಡುತ್ತಿಲ್ಲ. ಆದರೆ ಸರ್ಕಾರ ಕೊಟ್ಟ ಭಾಷಣವನ್ನು . . . **(ಗೊಂದಲ)**

**ಸಭಾಪತಿಯವರು:-** ಬಾವಿಯೊಳಗೆ ಧರಣಿ ನಿರತರಾದವರು ಸುಮ್ಮನೆ ಇರಬೇಕು. ಬಾವಿಯೊಳಗೆ ನಿಂತುಕೊಂಡು ಹೇಗೆಂದರೆ ಹಾಗೆ ಮಾತನಾಡಬಾರದು. ಬಾವಿಯೊಳಗೆ ಇರುವವರಿಗೆ ಕನಿಷ್ಠ ಸೌಜನ್ಯವಿಲ್ಲವೇ, ಬುದ್ಧಿ ಇಲ್ಲವೇ?

**(ಗೊಂದಲ)**

**ಶ್ರೀ ಸಲೀಂ ಅಹ್ಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ಇವರು ಮಾಡುತ್ತಿರುವುದು ಗೂಂಡಾಗಿರಿ ಅಲ್ಲವೇ? ಸದನವನ್ನು ನಡೆಯುವುದಕ್ಕೆ ಬಿಡದೇ ಇರುವುದು ಗೂಂಡಾಗಿರಿ ಅಲ್ಲವೇ?

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಹಿರಿಯ ಸದಸ್ಯರು, ನಾವು ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರ ಅರ್ಥವೇನು?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಅವರು ವೈಯಕ್ತಿಕವಾಗಿ ಮಾತನಾಡುತ್ತಾರೆ. ಎಲ್ಲಾ ಕಡತದಲ್ಲಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸಂವಿಧಾನದ ವಿರೋಧಿಗಳು ಏನು ಬೇಕಾದರೂ ಹೇಳುತ್ತಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಯೋಗ್ಯತೆ ಇಲ್ಲದವರು ಸಂವಿಧಾನ ವಿರೋಧಿ ಕೆಲಸ ಮಾಡಿ ಇಲ್ಲಿ ಬಂದು ಮಾತನಾಡಿದರೆ ಸುಮ್ಮನಿರಬೇಕೇ? ಯಾವರೀತಿ ಗೂಂಡಾಗಿರಿ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ತಲೆ ಹಿಡುಕ ನೀನು . . . **(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಅಲ್ಲಿ ನೋಡಿ ಯಾವರೀತಿ ಗೂಂಡಾಗಿರಿ ಮಾಡುತ್ತಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ, ಬಾವಿಯೊಳಗೆ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರು ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಗಳೆ, ಅವರನ್ನು ಸದನದಿಂದ ಆಚೆ ಹಾಕಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಗಳೆ, ಸಂವಿಧಾನವನ್ನು ಕಾಪಾಡುವುದಕ್ಕೆ ನಾವು ಏನು ಬೇಕಾದರೂ ಮಾಡುತ್ತೇವೆ.

(ಗೊಂದಲ)

**ಸಭಾಪತಿಯವರು:-** ಬಾವಿಯೊಳಗೆ ಇರುವವರು ಸುಮ್ಮನೆ ಬಾಯಿ ಮುಚ್ಚಿಕೊಂಡಿರಬೇಕು. ಇಲ್ಲದೇ ಇದ್ದರೆ ನಾನು ನನ್ನದೇ ಆದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಕೇಶವ್ ಪ್ರಸಾದ್ ಅವರನ್ನು ಹೊರಗೆ ಹಾಕಬೇಕಾಗುತ್ತದೆ. ಏನಾದರೂ ಮಾತನಾಡುವುದಿದ್ದರೆ ತಮ್ಮ ಜಾಗಕ್ಕೆ ಬಂದು ಮಾತನಾಡಬೇಕು. ಬಾವಿಯೊಳಗೆ ನಿಂತು ಈ ರೀತಿ ನಡೆದುಕೊಂಡರೆ ಸದನವನ್ನು ಹೇಗೆ ನಡೆಸುವುದಕ್ಕೆ ಆಗುತ್ತದೆ? ನಾವುಗಳೇ ಮಾಡಿದ ನಿಯಮಗಳನ್ನು ನಾವು ಪಾಲಿಸಬೇಕಾಗುತ್ತದೆ. ಈ ಧಿಕ್ಕಾರ ಕೂಗುವುದನ್ನು ನಾನೆಂದೂ ನೋಡಿಲ್ಲ. ನನ್ನ 45 ವರ್ಷದ ಅನುಭವದಲ್ಲಿ ಇಂತಹ ಘಟನೆಗಳು ನಡೆದಿರುವುದನ್ನು ನಾನು ನೋಡಿಲ್ಲ. ಬಾವಿಯೊಳಗೆ ಧರಣಿ ನಿರತರಾದವರು ಸುಮ್ಮನೆ ಇರಬೇಕು. ಇಲ್ಲದಿದ್ದರೆ ನನ್ನದೇ ಆದ ತೀರ್ಮಾನ ತೆಗೆದುಕೊಳ್ಳುತ್ತೇನೆ. ನಮ್ಮ ನಿಯಮಾವಳಿಗಳ ನಿಯಮ 333ರಲ್ಲಿ ಇರುವಂಥದ್ದನ್ನು ನಾನು ಓದುತ್ತೇನೆ.

"**ಚರ್ಚೆಯ ವರದಿಯಿಂದ ಕೆಲವು ಪದಗಳನ್ನು ತೆಗೆದುಹಾಕುವುದು:- ಇತರರಿಗೆ ಮಾನನಷ್ಟವನ್ನುಂಟು ಮಾಡುವಂಥ ಅಥವಾ ಅಸಭ್ಯವಾದ ಅಥವಾ ಸದನದ ಮರ್ಯಾದೆಗೆ ತಕ್ಕುದಲ್ಲವಾದ ಅಥವಾ ವ್ಯಕ್ತಿಯ ಘನತೆಗೆ ಯೋಗ್ಯವಲ್ಲದ ಪದವನ್ನು ಅಥವಾ ಪದಗಳನ್ನು ಚರ್ಚೆಯಲ್ಲಿ ಉಪಯೋಗಿಸಲಾಗಿದೆ ಎಂಬುದಾಗಿ ಸಭಾಪತಿಯವರು ಅಭಿಪ್ರಾಯಪಟ್ಟರೆ, ಅವರು ತಮ್ಮ ವಿವೇಚನಾನುಸಾರ, ಸದನದ ಕಾರ್ಯಕಲಾಪಗಳ ವರದಿಯಿಂದ ಅಂಥ ಪದಗಳನ್ನು ಬಿಟ್ಟುಬಿಡಬೇಕೆಂಬುದಾಗಿ ಆದೇಶಿಸಬಹುದು**" ಎಂದಿದೆ. ಹಾಗಾಗಿ "**[xxx]**" ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಆದರೆ ಆ ಪದವನ್ನು ಉಪಯೋಗಿಸಿದವರು ಅದಕ್ಕೆ ವಿಷಾದ ವ್ಯಕ್ತಪಡಿಸಬೇಕು.

**ಸಭಾಪತಿಯವರು:-** ನಾನು ಕಡತದಿಂದಲೇ ಆ ಪದವನ್ನು ತೆಗೆದು ಹಾಕಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಅಂತಹ ಪದಗಳನ್ನು ಕಡತದಿಂದ ತೆಗೆದು ಹಾಕಲೇಬೇಕು. ಅದು ಸಹಜ. ಆದರೆ ಆ ಪದ ಬಳಸಿದ್ದಕ್ಕೆ ವಿಷಾದ ವ್ಯಕ್ತಪಡಿಸಬೇಕು.

(ಗೊಂದಲ)

**ಶ್ರೀ ಸಲೀಂ ಅಹಮದ್:-** ಏಕೆ ವಿಷಾದವನ್ನು ವ್ಯಕ್ತಪಡಿಸಬೇಕು?

(ಗೊಂದಲ)

**ಸಭಾಪತಿಯವರು:-** ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಗಿದೆ.

**(ಭೋಜನ ವಿರಾಮಕ್ಕೆಂದು ಸದನವನ್ನು ಮಧ್ಯಾಹ್ನ 12 ಗಂಟೆ 56 ನಿಮಿಷದಿಂದ 3 ಗಂಟೆಯವರೆಗೆ ಮುಂದೂಡಲಾಯಿತು)**

(58)28-01-2026/3-20/bkp-md

**(ಮಧ್ಯಾಹ್ನ 12 ಗಂಟೆ 56 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತೆ ಮಧ್ಯಾಹ್ನ 3 ಗಂಟೆ 25 ನಿಮಿಷಕ್ಕೆ ಸೇರಲ್ಪಟ್ಟಿತು.)**

**(ಪೀಠದಲ್ಲಿ ಮಾನ್ಯ ಸಭಾಪತಿಯವರು ಉಪಸ್ಥಿತರಾದರು)**

**(ಈ ಹಂತದಲ್ಲಿ ರಾಜ್ಯಪಾಲರ ಭಾಷಣದ ವಿಚಾರವಾಗಿ ಮತ್ತೆ ಬಿ.ಜೆ.ಪಿ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಬಾವಿಯಲ್ಲಿ ಧರಣಿನಿರತರಾದರು)**

**ಸಭಾಪತಿಯವರು:-** ಮತ್ತೊಂದು ಬಾರಿ ತಮಗೆಲ್ಲಾ ಮನವಿಯನ್ನು ಮಾಡುತ್ತೇನೆ. ದಯಮಾಡಿ ತಾವುಗಳು ಸದನವನ್ನು ನಡೆಸಲಿಕ್ಕೆ ಅನುವು ಮಾಡಿಕೊಡಬೇಕು. ಇಲ್ಲಿಯವರೆಗೆ ಸದನವನ್ನು ನಡೆಸಲಿಕ್ಕೆ ಎಲ್ಲಾ ರೀತಿಯಿಂದಲೂ ನಮ್ಮ ಪ್ರಯತ್ನವನ್ನು ಮಾಡಿದ್ದೇವೆ. ಇಷ್ಟಕ್ಕೆ ಈ ವಿಷಯವನ್ನು ಮುಗಿಸಿಕೊಂಡು ಬಾವಿಯಲ್ಲಿರುವ ಮಾನ್ಯ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಬೇಕು. ಸದನವನ್ನು ನಡೆಸಲಿಕ್ಕೆ ನನಗೆ ಸಹಕಾರವನ್ನು ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಪ್ರಶ್ನೋತ್ತರಗಳನ್ನು ಈಗ ತೆಗೆದುಕೊಳ್ಳುತ್ತಿದ್ದು ಶ್ರೀ ಎಸ್.ವ್ಹಿ.ಸಂಕನೂರ ರವರು ಮಾತಾನಾಡಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ರವರು ಬಾವಿಯಲ್ಲಿ ಧರಣಿ ನಿರತರಾಗಿರುತ್ತಾರೆ.

**ಸಭಾಪತಿಯವರು:-** ಶ್ರೀಯುತ ಭೋಜೇಗೌಡರವರೆ, ಅವರುಗಳಿಗೆ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಎಂದು ಹೇಳಿ ನಾನು ವಿನಂತಿ ಮಾಡಿಕೊಂಡಿರುವುದರಿಂದ ಅವರುಗಳು ಹೋಗಬೇಕು. ಅವರುಗಳು ಹೋಗಲಿಕ್ಕೆ ನಾನು ಏನು ಮಾಡಬೇಕೆಂದು ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಬಾವಿಯಿಂದ ಅವರುಗಳು ಹೊರಗಡೆ ಬರುವಂತೆ ಮಾಡಿ.

**ಸಭಾಪತಿಯವರು:-** ಅವರುಗಳಿಗೆ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ ಎಂದು ಹೇಳಿದ್ದೇನೆ. ಅದನ್ನು ಬಿಟ್ಟು ಬರಿ ಯಡವಟ್ಟುತನ ಮಾಡುವ ರೀತಿಯಲ್ಲಿ ಮಾಡಿದರೆ ಹೇಗೆ? ಅದರ ಬಗ್ಗೆ ಏನು ಮಾಡಬೇಕೆಂದು ನೀವು ನನಗೆ ಹೇಳಿ. ಇಲ್ಲದಿದ್ದರೆ ನೀವು ಇಲ್ಲಿ ಬಂದು ಕುಳಿತುಕೊಳ್ಳಿ. ನಾನು ಹೊರಗೆ ಹೋಗುತ್ತೇನೆ. ದಯಮಾಡಿ ಬನ್ನಿ. ಸದನವನ್ನು ನಡೆಸಿ ಬನ್ನಿ. ನೀವುಗಳು ತಿಳಿದುಕೊಳ್ಳಬೇಕು. ನಾನು ಸದನವನ್ನು ನಡೆಸಲು ನಾನು ಬೆಳಗ್ಗೆಯಿಂದ ತಮಗೆಲ್ಲಾ ವಿನಂತಿ ಮಾಡುತ್ತಿದ್ದೇನೆ. ಬರಿ ಗಲಾಟೆ

ಮಾಡಿಕೊಂಡು ಸದನ ನಡೆಯಲಿಕ್ಕೆ ಬಿಡದಿದ್ದರೆ ಹೇಗೆ? ಈಗ ನಾನು ಏನು ಮಾಡಬೇಕೆಂದು ಹೇಳಿ. ನೀವುಗಳು ಬಾವಿಯಿಂದ ಹೊರಗಡೆ ಬಂದು ನಿಮ್ಮ ನಿಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ. ನೀವುಗಳು ಸ್ಥಳದಲ್ಲಿ ಕುಳಿತುಕೊಳ್ಳಬೇಕೆಂದರೆ ನಾನು ಸದನವನ್ನು ಮುಂದೂಡಬೇಕಾ? ನಾನು ಅಷ್ಟೇ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ, ನಾನು ಮತ್ತೊಮ್ಮೆ ವಿನಂತಿ ಮಾಡುವುದೇನೆಂದರೆ ದಯಮಾಡಿ ತಾವುಗಳು ತಮ್ಮ ತಮ್ಮ ಸ್ಥಳಗಳಲ್ಲಿ ತೆರಳಿ ಕುಳಿತುಕೊಳ್ಳಿ. ಇಲ್ಲವೆಂದರೆ ನಾನು ಸದನವನ್ನು ನಾಳೆಗೆ ಮುಂದೂಡುತ್ತೇನೆ. ಏನೂ ನಡೆಯುವುದು ಬೇಡವೆಂದು ನಿಮ್ಮ ಮನಸ್ಸಿನಲ್ಲಿದ್ದರೆ, ಅದೇ ರೀತಿಯಲ್ಲಿ ಮಾಡಿ. ಮನುಷ್ಯನಿಗೆ ಒಂದು limit ಇರಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವು ಸದನವನ್ನು ಮುಂದೂಡಿದಂತಹ ಸಂದರ್ಭದಲ್ಲಿ ಅವರು ಬಾವಿಯಲ್ಲಿದ್ದರು. ಪದ್ಧತಿ ಏನು? ಬಾವಿಯಲ್ಲಿ ಇದ್ದವರು ಬಾವಿಯಲ್ಲಿಯೇ ಇದ್ದಾರೆ.

**ಸಭಾಪತಿಯವರು:-** ಹೌದು, ಅವರು ಇದ್ದಾರೆ. ನಾನು ಏನು ಹೇಳುತ್ತೇನೆಂದರೆ ಎಲ್ಲರೂ ನಿಮ್ಮ ನಿಮ್ಮ ಸ್ಥಳಕ್ಕೆ ಹೋಗಿ ಎಂದು ವಿನಂತಿ ಮಾಡಿಕೊಂಡು ಸದನವನ್ನು ನಡೆಸುತ್ತೇನೆ. ಒಂದು ಬಾರಿಯಲ್ಲಾ, ಹತ್ತು ಬಾರಿ ಹೇಳುತ್ತೇನೆ. ತಮ್ಮ ತಮ್ಮ ಸ್ಥಳಕ್ಕೆ ಹೋಗಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ ನಮ್ಮ ಬೇಡಿಕೆ ಏನಿತ್ತು, ಅದನ್ನು ಈಡೇರಿಸಿದರೆ ನಮಗೇನೂ ಇಲ್ಲ. ಏಕೆಂದರೆ, ನೋಡಿ, ಸದನ ವಕ್ರ ವಕ್ರವಾಗಿ ನಡೆಯಬಾರದು, ಇದಕ್ಕೆ ನಾಳೆ ದಿವಸ ನಾವೂ ಕೂಡ ಈಗ ನೀವು ಚರಿತ್ರೆಯ ಪುಟಗಳನ್ನು ತೆಗೆದು ಏನು ಓದುತ್ತೀರಿ, ಹಾಗೆಯೇ ನಮ್ಮ ಚರಿತ್ರೆಯನ್ನು ಸಹ ನಾಳೆ ಪುಟಗಳಲ್ಲಿ ಬರುತ್ತವೆ. ಇಂತಹವರೆಲ್ಲರೂ ಇದ್ದರು, ಅವರೇ ಈ ರೀತಿಯಲ್ಲಿ ನಡೆದುಕೊಂಡಿದ್ದರು ಎಂದು ಗೊತ್ತಾಗುತ್ತದೆ. ಅದಕ್ಕೆ ಇದರ ವಿಚಾರವಾಗಿ ಸರಿ ದಾರಿಯಲ್ಲಿ ಹೋಗುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ, ಅಷ್ಟೆ. ಅಮೇಲೆ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಮೊನ್ನೆ ಕಾನೂನು ಸಚಿವರು ನಿನ್ನೆ ಇಲ್ಲಿ ಇದ್ದರು. ತಾವು ಅವರನ್ನು ಕರೆಸಿದ್ದೀರಿ.

**ಶ್ರೀ ರಮೇಶ್ ಬಾಬು(ನಾಮನಿರ್ದೇಶಿತರು):-** ಮೊದಲನೆಯ ಪ್ರಶ್ನೆಗೆ ನೀವು ಅವರನ್ನು ಕರೆದಿದ್ದೀರಿ, ಅವರು ಬಂದಿರುವುದಿಲ್ಲ, ಎರಡನೆಯವರಿಗೆ ಅವಕಾಶವನ್ನು ಕೊಡಿ. ಪ್ರಶ್ನೋತ್ತರವನ್ನು ತಾವು ಪ್ರಾರಂಭ ಮಾಡಿದ್ದೀರಿ,

**ಶ್ರೀ ಶಿವಕುಮಾರ್ ಕೆ( ನಾಮನಿರ್ದೇಶಿತರು):-**ಮಾನ್ಯ ಸಭಾಪತಿಯವರೆ, ತಾವು ಪ್ರಶ್ನೋತ್ತರ ತೆಗೆದುಕೊಂಡು ಮುಗಿದ ಮೇಲೆ ನಮಗೆ ಶೂನ್ಯವೇಳೆಯಲ್ಲಿ ಅವಕಾಶ ಕೊಡಬೇಕು. ಒಬ್ಬ ದಲಿತ ಹೆಣ್ಣುಮಗಳನ್ನು ಕರ್ನಾಟಕದಲ್ಲಿ ಕಂಬಕ್ಕೆ ಕಟ್ಟಿ ಹೊಡೆಯುತ್ತಾರೆ. ದಯಮಾಡಿ ನಮಗೆ ಅವಕಾಶವನ್ನು ಕೊಡಬೇಕು. ಇದನ್ನು ಕೇಳಬೇಕೆಂದು ನಾನು ಬೆಳಗಿನಿಂದ ಇಲ್ಲಿ ಕುಳಿತಿದ್ದೇನೆ.

**ಸಭಾಪತಿಯವರು:–** ಶ್ರೀಯುತ ಶಿವಕುಮಾರ್‌ರವರೆ, ನಾನು ಹೇಳುವುದನ್ನು ಕೇಳಿ. ಸದನವನ್ನು ನಡೆಸಬೇಕಾದರೆ ರೀತಿ–ನೀತಿಗಳು ಇರುತ್ತವೆ. ನನ್ನ ಕರ್ತವ್ಯವವನ್ನು ನಾನು ಮಾಡುತ್ತೇನೆ. ಇದು ಎಲ್ಲಿಯವರೆಗೆ ಸಾಧ್ಯವಿದೆಯೋ ಅಲ್ಲಿಯವರೆಗೆ ಮಾಡುತ್ತೇನೆ. ಪ್ರಯತ್ನ ಮಾಡುತ್ತೇನೆ. ಅದಕ್ಕೆ ಫಲ ಸಿಕ್ಕಿದರೆ ಪರವಾಗಿಲ್ಲ, ಸಿಗದಿದ್ದರೆ ನನನದೇ ಆದ ರೀತಿಯಲ್ಲಿ ನಾನು ಮಾಡುತ್ತೇನೆ.

(ಮುಂದು)

(059) 28.01.2026 03.30 ಎಸ್‌ವಿ–ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ನಿಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸುವವರನ್ನು ದಯವಿಟ್ಟು ಹೊರಗೆ ಕಳುಹಿಸಬೇಕೆಂದು ನಮ್ಮ ವಿನಂತಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ತಾವು ಹೇಳಿಬಿಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ನಿನ್ನೆ ತಾವು adjourn ಮಾಡಿ ಮಾತುಕತೆ ಮಾಡಲು ತಮ್ಮ ಕೊಠಡಿಗೆ ಕರೆದಿದ್ದ ಸಂದರ್ಭದಲ್ಲಿ ಕೆಲವಾರು ವಿಷಯಗಳು ಬಂದಾಗ, ನಾವು ಅದನ್ನು ಒಪ್ಪದೇ ಎದ್ದು ಬಂದೆವು. ಮಾನ್ಯ ಕಾನೂನು ಸಚಿವರು ಕೆಳಮನೆಯಲ್ಲಿ ಒಂದು ಹೇಳಿಕೆಯನ್ನು ಮಾಡಿದ ಸಂದರ್ಭದಲ್ಲಿ ಮಾನ್ಯ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಂತೋಷ್ ಲಾಡ್‌ರವರು, ಮಾನ್ಯ ಸಭಾನಾಯಕರು ಹಾಗೂ ಮಾನ್ಯ ರವಿಕುಮಾರ್‌ರವರು ಸೇರಿದಂತೆ ಅನೇಕ ಸದಸ್ಯರು ಹಾಜರಿದ್ದರು. ಅವರ ಮಧ್ಯದಲ್ಲಿ ಸಭಾಪತಿಯವರು ಒಂದು ವಿಷಯವನ್ನು ಹೇಳಿದರು. ಅಲ್ಲಿ ಆಗಿದ್ದು ತಪ್ಪು, ಏಕೆಂದರೆ ರಾಷ್ಟ್ರಗೀತೆಯನ್ನು ಕೇಳಿ ಹೋಗುವಂತೆ ನಾನು ಮೂರು ಬಾರಿ ತಡೆದೆ. ಆದರೆ ಅವರು ಹೊರಟು ಹೋದರು ಎಂದು ತಾವು ಹೇಳಿದ್ದೀರಿ ಎಂದು ಕೆಳಮನೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಆ ಸದನದಲ್ಲಿ ಹೇಳಿಕೆ ಕೊಟ್ಟಿರುವುದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನೀವು ಆ ರೀತಿ ಹೇಳಿರುವುದಕ್ಕೆ ಸಾಧ್ಯವಿಲ್ಲ. ಆದರೆ ಇದನ್ನು ತೆಗೆದುಕೊಂಡು ಹೋಗಿ ಚರ್ಚೆ ಮಾಡಿದ ಮೇಲೆ ತಮ್ಮ ಮೇಲೆ ತಪ್ಪು ಅಭಿಪ್ರಾಯ ಬಂದಿದೆ. ತಾವು ಹೇಳಿದ್ದೀರಾ?

**ಶ್ರೀ ಎನ್. ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಎಲ್ಲಾ ವಿಷಯಗಳನ್ನು ಒಟ್ಟಿಗೆ ಇಲ್ಲಿ ತಂದು ಸಭೆಯನ್ನು ನಡೆಸಲು ಗೊಂದಲ ಸೃಷ್ಟಿಯಾಗುತ್ತಿದೆ.

**ಸಭಾಪತಿಯವರು:–** ಒಂದು ನಿಮಿಷ ಕೇಳಿ. ನಾನು ಯಾವುದೇ ರೀತಿಯಿಂದಲೂ ಘನತೆವೆತ್ತ ರಾಜ್ಯಪಾಲರ ಜೊತೆಯಲ್ಲಿ ಯಾವುದೇ ಮಾತನಾಡಿಲ್ಲ. ನನ್ನ ಪಕ್ಕದಲ್ಲಿ ಕುಳಿತಿದ್ದರು. ಅವರು ಭಾಷಣವನ್ನು ಮುಗಿಸಿ ಹೊರಟರು.

ಅವರು ಮೆಟ್ಟಿಲು ಇಳಿಯುವಾಗ ಅಕಸ್ಮಾತ್ ಆಗಿ ನಾನು ಅವರ ಮುಂದೆ ಇದ್ದುದರಿಂದ ಮೆಟ್ಟಿಲು ದಾಟುವಾಗ ಸಹಾಯ ಮಾಡುವ ಕೆಲಸವನ್ನು ಮಾಡಿದ್ದೇನೆ. ಅದು ಯಾವುದೂ ನನಗೆ ಸಂಬಂಧವಿಲ್ಲ ಮತ್ತು ಹೊರಗೆ ಆಗಿರುವುದನ್ನು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಮ್ಮ ಬಳಿ ವೀಡಿಯೋ ಇದೆ. ಮಾನ್ಯ ಕಾನೂನು ಸಚಿವರಿಂದ ಸದನದ ಹಕ್ಕುಚ್ಯುತಿಯಾಗಿದೆ.

**ಶ್ರೀ ಎಸ್. ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ನಾನು ನಿನ್ನೆಯಿಂದ ನಡೆದಂಥ ಎರಡು ಮೂರು ಸಭೆಗಳಲ್ಲಿ ಭಾಗವಹಿಸಿದ್ದೇನೆ. ನಮ್ಮ ಸಭಾಪತಿಯವರ ಬಾಯಿಂದ ಆ ರೀತಿಯ ಮಾತುಗಳು ಬಂದಿರುವುದಿಲ್ಲ.

**ಸಭಾಪತಿಯವರು:–** ನಾನು ಮಾತನಾಡಿಯೇ ಇಲ್ಲವಲ್ಲ. ನಾನು ಬಾಯಿಯನ್ನೇ ತೆಗೆದಿಲ್ಲ.

**ಶ್ರೀ ಎನ್, ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಅಲ್ಲಿಯೇ ಇದ್ದು, ಮಾನ್ಯ ಸಭಾನಾಯಕರು, ಮಾನ್ಯ ಹೆಚ್.ಕೆ.ಪಾಟೀಲರು ಇದ್ದರು. ನಾನು ಹೀಗೆ ಹೇಳಿದ್ದೇನೆ ಎಂದು ಸಭಾಪತಿಯವರು ಎಲ್ಲಿಯೂ ಹೇಳಲಿಲ್ಲ. ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡೋಣ. ನೀವೇನಾದರೂ ಒಂದು settlement ಗೆ ಬನ್ನಿ ಎಂದು ಹೇಳಿದರೇ ವಿನಃ ನೀವು ಆ ರೀತಿ ಹೇಳಿರುವುದಿಲ್ಲ. ಮಾನ್ಯ ಸಭಾಪತಿಯವರೇ, ನೀವೇ ಸಾಕ್ಷಿ. ಮಾನ್ಯ ಸಭಾಪತಿಯವರೇ ಸ್ಪಷ್ಟೀಕರಣ ಮಾಡಲಿ.

**ಸಭಾಪತಿಯವರು:–** ನಾನು ಏನೂ ಮಾತನಾಡಿಯೇ ಇಲ್ಲ ಎಂಬುದು ಖರೆ.

**ಶ್ರೀ ಎನ್. ಎಸ್. ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಇಲ್ಲಿ ಸಂಬಂಧವಿಲ್ಲದ ವಿಷಯವನ್ನು raise ಮಾಡಲಿಕ್ಕೆ ಅವಕಾಶವಿದೆಯೇ? ಕೆಳಮನೆಯ ವಿಷಯವನ್ನು ಕೆಳಮನೆಯಲ್ಲಿ ಮಾತನಾಡಲಿ. ಆ ವಿಷಯವನ್ನು ಈ ಮನೆಯಲ್ಲಿ ತಂದು ಏಕೆ ಸಮಯ ವ್ಯರ್ಥ ಮಾಡುತ್ತಿದ್ದಾರೆ? ಮಾನ್ಯ ಸಭಾಪತಿಯವರೆ, ಅವರು ನಿಮಗೆ ಪ್ರಶ್ನೆ ಮಾಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ನನಗೆ ಸಂಬಂಧವಿಲ್ಲದ ವಿಷಯ. ನಾನು ರಾಜ್ಯಪಾಲರ ಜೊತೆಯಲ್ಲಿ ಮಾತನಾಡಿರುವುದಿಲ್ಲ ಹಾಗೂ ಏನೂ ಹೇಳಿಲ್ಲ. ರಾಜ್ಯಪಾಲರು ತಮ್ಮ ಭಾಷಣವನ್ನು ಮುಗಿಸಿ ಹೊರಟಾಗ ಅವರು ನಮ್ಮ ಮೆಟ್ಟಿಲುಗಳನ್ನಿಳಿದು ಹೊರಟಿದ್ದರು. ಹೋಗುವಾಗ ಅವರ ಹಿಂದೆ ಹೋಗಿ ಅವರನ್ನು ಬೀಳ್ಕೊಟ್ಟು ಬಂದಿದ್ದೇನೆ. ಇಷ್ಟು ಬಿಟ್ಟು ನಾನು ಬೇರೆ ಏನನ್ನೂ ಮಾತನಾಡಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡಿದ್ದಾರೆ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಗಳ ವಿಷಯವನ್ನು ಪ್ರಸ್ತಾಪಿಸಿರುವುದರಿಂದ ಅವರನ್ನು ಕರೆಸಿ. ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮ ಹೆಸರನ್ನು ಅಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಮಗೂ ಅಪಮಾನ ಮಾಡಿದ್ದಾರೆ, ನಮಗೂ ಅಪಮಾನ ಮಾಡಿದ್ದಾರೆ, ಸದನಕ್ಕೂ ಅಪಮಾನ ಮಾಡಿದ್ದಾರೆ. ಸದನದ ಹಕ್ಕುಚ್ಯುತಿಯಾಗಿದೆ.

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಭಾಪತಿಯವರೆ, ಅವರು ಪ್ರತಿಬಾರಿ ಹೊಸ ವಿಷಯಗಳನ್ನು ತರುತ್ತಿದ್ದಾರೆ. ದಯಮಾಡಿ ತಾವು ಸದನ ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಸಭಾಪತಿಯವರು:–** ಈ ಸದನದ ಹೊರಗೆ, ಕೆಳಮನೆಯಲ್ಲಿ ನಡೆದಿರುವುದಕ್ಕೆ ನಾವು ಹೇಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್. ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಹಾಗಲ್ಲ. ಆ ಮನೆಯ ಸದಸ್ಯ ಅಲ್ಲಿ ಹೇಳಿರುವ ವಿಚಾರ ನಮ್ಮ ಸಭಾಪತಿಯವರಿಗೆ ಸಂಬಂಧಿಸಿದ್ದಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರನ್ನು ಕರೆಸಿ. ಚರ್ಚೆ ಮಾಡೋಣ. ಮಾನ್ಯ ಸಭಾಪತಿಯವರೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎಸ್. ಎಲ್. ಭೋಜೇಗೌಡ:–** ಅವರನ್ನು ಕರೆಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮ ಹೆಸರನ್ನು ತೆಗೆದುಕೊಂಡು ಅಪಮಾನ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ದಯಮಾಡಿ ಕಾನೂನು ಸಚಿವರನ್ನು ಕರೆಸಿ. ಅವರು ಏನಾಯಿತೆಂದು ವಿವರಿಸಲಿ.

**(ಗೊಂದಲ)**

**ಸಭಾಪತಿಯವರು:–** ನಿಯಮದ ಪ್ರಕಾರ ಏನಿದೆಯೆಂದು ನೋಡುತ್ತೇನೆ. ನಾನು ಏನೂ ನೋಡಿಲ್ಲ. ಏನು ವಿಷಯವೆಂದು ನಾನು ನೋಡಿ ಆಮೇಲೆ ಕರೆಸುತ್ತೇನೆ.

**(ಗೊಂದಲ)**

**ಶ್ರೀ ಐವನ್ ಡಿಸೋಜ:–** ಕಾನೂನು ಪ್ರಕಾರ ಚರ್ಚೆಯಾಗಲಿ. ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡೋಣ. ಅವರು ಎಲ್ಲವನ್ನೂ ಬಿಟ್ಟು ಹೊಸದನ್ನು ತರುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜ ಅವರೇ, ನಿಮಗೆ ಸ್ವಲ್ಪವಾದರೂ ತಿಳುವಳಿಕೆಯಿಲ್ಲವೇ? ಕುಳಿತುಕೊಳ್ಳಿ.

**ಶ್ರೀ ಐವನ್ ಡಿಸೋಜ:–** ಮಾನ್ಯ ಸಭಾಪತಿಯವರೇ, ತಾವು ಹೇಗೆ tolerate ಮಾಡುತ್ತೀರಿ?

**ಸಭಾಪತಿಯವರು:–** ನಿಮಗೆ ಮಾತನಾಡುವುದಕ್ಕೆ ಏನಿದೆ? ಏಕೆ ಮಾತನಾಡುತ್ತೀರಿ? ಮುಂದಿನ ಪ್ರಶ್ನೆ ಎಸ್.ವ್ಹಿ.ಸಂಕನೂರ, ಶ್ರೀ ಟಿ.ಎ. ಶರವಣ, ಶ್ರೀ ಪಿ.ಹೆಚ್.ಪೂಜಾರ್, ಶ್ರೀ ಎಂ.ಎಲ್. ಅನಿಲ್ ಕುಮಾರ್ ರವರೆಲ್ಲರೂ ಗೈರು ಹಾಜರಾಗಿದ್ದಾರೆ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಇತ್ಯರ್ಥ ಆಗಿಲ್ಲ, ಇತ್ಯರ್ಥ ಆಗದೆ ಈ ರೀತಿ ಮಾಡುವುದು ಸರಿಯಲ್ಲ. ತಮ್ಮ ಮೇಲೆಯೂ ಕೆಟ್ಟ ಅಭಿಪ್ರಾಯ ಬರುವ ರೀತಿಯಲ್ಲಿ ಅಲ್ಲಿ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಅದನ್ನು ಆಮೇಲೆ ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ನೀವು ಅವರನ್ನು ಕರೆಸಿ.

**ಶ್ರೀ ಎನ್. ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಕೆಳಮನೆಯ ಯಾವುದೇ ಭಾಷಣವು ಅಲ್ಲಿನ ಕಾರ್ಯನೀತಿಯ ಬಗ್ಗೆ ಸಚಿವರ ಸ್ಪಷ್ಟ ಹೇಳಿಕೆಯಾಗಿರುತ್ತದೆಯೇ ವಿನಃ ಅದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಮಾತನಾಡತಕ್ಕದ್ದಲ್ಲ.

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ. ಬಸನಗೌಡ ಬಾದರ್ಲಿ, ಪ್ರಶ್ನೆ ಕೇಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರ ಹೆಸರನ್ನು ತೆಗೆದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 175 ಅನ್ನು ಮಾನ್ಯ ಸಾರಿಗೆ ಸಚಿವರಿಗೆ ಕೇಳಬಯಸುತ್ತೇನೆ.

**(ಗೊಂದಲ)**

**ಶ್ರೀ ಎಸ್. ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರು ಎಲ್ಲರಿಗೂ ಸಂಬಂಧಪಟ್ಟವರಾಗಿದ್ದಾರೆ. ಅಲ್ಲಿ ಅವರು ಹೇಳಿರುವುದು ನಮ್ಮ ಸಭಾಪತಿಗಳ ಮೇಲೆ. ಸಚಿವರು ಎರಡೂ ಸದನಕ್ಕೆ ಸೇರಿರುತ್ತಾರೆ. ಹೇಳಿರುವುದು ನಮ್ಮ ಸಭಾಪತಿಯವರ ಮೇಲೆ.

**ಶ್ರೀ ರಾಮಲಿಂಗಾರೆಡ್ಡಿ:–** ಉತ್ತರವನ್ನು ಒದಗಿಸಲಾಗಿದೆ.

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ:–** ಉತ್ತರವನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಅದೇನು ಎಂದು ನಾನು ನೋಡಬೇಕಲ್ಲವೆ? ನನಗೆ ಕೊಡಿ. ಕ್ರಮ ತೆಗೆದುಕೊಳ್ಳೋಣ. ಇಲ್ಲಿ ಬೇಡ, ಆಫೀಸ್‌ನಲ್ಲಿ ಕೊಡಿ.

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇವತ್ತು ಸಿಂಧನೂರು, ಮಸ್ಕಿ ಹಾಗೂ ಲಿಂಗಸುಗೂರು ತಾಲ್ಲೂಕುಗಳ ಒಳಗೊಂಡಂತೆ...

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇದು ನಿಮ್ಮ ಮೇಲೆ ಅಪವಾದವಾಗುತ್ತದೆ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಬಸನಗೌಡ ಬಾದರ್ಲಿಯವರು ಮಾತನಾಡುತ್ತಿದ್ದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಹೌಸ್ ಆರ್ಡರ್‌ನಲ್ಲಿಲ್ಲ. ಇದು ಮುಗಿಯದೆ, ತೀರ್ಮಾನವಾಗದೆ ಹೇಗೆ ಅವರು ಮಾತನಾಡುತ್ತಾರೆ? ಇದು ಬಹಳ ವಕ್ರ ವಕ್ರವಾಗಿ ನಡೆಯುತ್ತಿದೆ.

**ಸಭಾಪತಿಯವರು:–** ಮಾನ್ಯ ಬಾದರ್ಲಿಯವರೆ, ಒಂದು ನಿಮಿಷ ತಡೆಯಿರಿ. ನಾನು ಏನು ಮಾಡಬೇಕೆಂದು ಹೇಳಿಬಿಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಇದು ನ್ಯಾಯಬದ್ಧವಾಗಿ ನಡೆಯುತ್ತಿದೆಯೇ? ಈ ರೂಲ್ ಬುಕ್‌ಗೇನು ಬೆಲೆ ಇಲ್ಲವೇ? ಇದಕ್ಕೆ ಬೆಲೆ ಇಲ್ಲ ಎಂದರೆ ಹರಿದು ಬಿಸಾಕುತ್ತೇವೆ. ಇದು ಏಕೆ ಬೇಕು?

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಗಳ ಪುಸ್ತಕವನ್ನು ಹರಿದು ಹಾಕಿದರು)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಎಲ್ಲರೂ ಎದ್ದು ನಿಂತು ಒಟ್ಟಾಗಿ ಮಾತನಾಡತೊಡಗಿದರು)**

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರು ಪರಸ್ಪರ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾವು ಇವರ ಗೂಂಡಾಗಿರಿಗೆ ಹೆದರುವುದಿಲ್ಲ. ಎಂಥಾ ದುಂಡಾವರ್ತಿ ಇದು. ದುಂಡಾವರ್ತಿಗೆ ನಾವು ಹೆದರುವುದಿಲ್ಲ. ಮಾಡಲಿ, ಅದೇನು ಮಾಡುತ್ತಾರೋ ಮಾಡಲಿ. ಸದನ ನಡೆಯಬೇಕು. ಸದನದ ನಡವಳಿಕೆಗೆ ಗೌರವ ಬರಬೇಕು. ಸಂವಿಧಾನಕ್ಕೆ ಗೌರವ ಬರಬೇಕು.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇವರಿಗೆ ಸಂವಿಧಾನದ ಬಗ್ಗೆ ಗೌರವ, ಮರ್ಯಾದೆ ಇದೆಯೇ?

**ಶ್ರೀ ಎಸ್. ಎಲ್. ಭೋಜೇಗೌಡ:-** ನೀವು challenge ಮಾಡುತ್ತೀರಾ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ರೂಲ್ ಪ್ರಕಾರ ನಡೆದುಕೊಳ್ಳುವುದಿಲ್ಲ ಎಂದ ಮೇಲೆ ರೂಲ್ ಬುಕ್ ಏಕೆ ಬೇಕು ಇವರಿಗೆ? ಇಷ್ಟ ಬಂದಂತೆ ನಡೆದುಕೊಳ್ಳುವುದಾದರೆ ಹೀಗೆಯೇ ಮಾಡಿ.

**(ಈ ಹಂತದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರು ಪರಸ್ಪರ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**(ಗೊಂದಲ)**

(ಮುಂದು)

(60) 28-01-2026, 3.40 ಕೆಜಿ.ಎಕೆ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು (ತಮ್ಮ ಸ್ಥಾನದಿಂದ ಎದ್ದುನಿಂತು):-** ಒಂದು ನಿಮಿಷ. ನಾನು ಹೇಳುವವರೆಗೆ ಎಲ್ಲರೂ ಕೇಳಿ. ವಿರೋಧ ಪಕ್ಷದ ನಾಯಕರೇ, ನಾನು ಪೀಠಕ್ಕೆ ಬಂದ ತಕ್ಷಣ ಎರಡು ಬಾರಿ ಎಲ್ಲರೂ ನಿಮ್ಮ ನಿಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ ಎಂದು ವಿನಂತಿ ಮಾಡಿದ್ದೇನೆ. ಈಗ ತಾವುಗಳು ನಿಮ್ಮ ನಿಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ. ಈಗ ನಿಮ್ಮ ನ್ಯಾಯ ಏನು? ಮಾನ್ಯ ಅಬಕಾರಿ ಸಚಿವರಾದ ಶ್ರೀ ಆರ್.ಬಿ.ತಿಮ್ಮಾಪುರರವರ ಬಗ್ಗೆ ಉತ್ತರ ಹೇಳಬೇಕು

ಎನ್ನುವುದಾಗಿದೆ. ನಾನು ಸರ್ಕಾರಕ್ಕೆ ಹೀಗೆ ಮಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸರ್ಕಾರ ನಿನ್ನೆ ದಿವಸ ಏನು ಹೇಳಿದೆ, ಇವತ್ತು ತಾವು ಉತ್ತರ ಹೇಳಿ ಎಂದು ಹೇಳುತ್ತಿದ್ದೀರಿ. ನಾನು ಈಗಾಗಲೇ Governor's Address ಮೇಲೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ಅದನ್ನು ಮಾಡುತ್ತಿದ್ದಾರೆ. ಅದು ಒಂದು ಹಂತಕ್ಕೆ ಬರಲಿ. ಅದು ಬಂದಾಗ ಬೇಕಾದರೆ, ನೀವು ಹಠ ಹಿಡಿದು ಕುಳಿತುಕೊಳ್ಳುವುದಕ್ಕೆ ಹತ್ತಿರಿ. ಈಗ ನಾನು ಕರೆದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಅರ್ಧ ಮಾತನಾಡಿದ್ದಾರೆ. ನಂತರ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ಮಾತನಾಡಬೇಕು. ಈಗ ನಾವು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಸಲ್ಲಿಸುವುದಕ್ಕೆ ಬಂದಿದ್ದು, ಅದು ಪ್ರಾರಂಭವಾಗಿದೆ. Whether it is right or wrong ಎನ್ನುವುದನ್ನು ಆಮೇಲೆ ನೋಡೋಣ. ಈಗ ಅದು ಪ್ರಾರಂಭವಾಗಿದೆ. ಅದರಂತೆ ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ. ಅದು ಮುಗಿಯಲಿ. ತಮ್ಮದ್ದು ಏನೇ ಇದ್ದರೂ ಸಹ, ಅದನ್ನು ಕೇಳುವಂತಹ ಜವಾಬ್ದಾರಿ ನನ್ನದು ಇದೆ. ನಾನು ಕೇಳುತ್ತೇನೆ. ತಾವು ದಯಮಾಡಿ ನನ್ನ ಮಾತನ್ನು ಕೇಳಿ. ನಾನು ತಮ್ಮೆಲ್ಲರಿಗೂ request ಮಾಡಿಕೊಳ್ಳುತ್ತೇನೆ. ನಮ್ಮ ಬಗ್ಗೆ ಸಾರ್ವಜನಿಕರು ಏನು ತಿಳಿದುಕೊಳ್ಳುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ತಾವೆಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ. ಈಗ ಸದನವನ್ನು ನಡೆಸೋಣ. ನೀವು ಏನಾದರೂ ಮತ್ತೆ ಅದರ ಬಗ್ಗೆ ಪ್ರಸ್ತಾಪ ಮಾಡುವುದಿದ್ದರೆ ಖಂಡಿತವಾಗಿ ಸಮಯ ಕೊಡುತ್ತೇನೆ. ರಾತ್ರಿ ಒಂದು ಗಂಟೆಯಾದರೂ ಸಹ ಚಿಂತೆ ಇಲ್ಲ. ತಮಗೆಲ್ಲಾ ಮಾತನಾಡುವುದಕ್ಕೆ ಸಮಯ ಕೊಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮಾನ್ಯ ಸಭಾನಾಯಕರ ಸ್ಥಾನದ ಬಳಿ ಗುಂಪುಗೂಡಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು (ಎದ್ದುನಿಂತು):-** ಒಂದು ನಿಮಿಷ. ನಾನು ಹೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು (ಎದ್ದುನಿಂತು):-** ಒಂದು ನಿಮಿಷ. (ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ಪುಸ್ತಕವನ್ನು ಸಭೆಗೆ ತೋರಿಸಿತ್ತಾ) ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ಪುಸ್ತಕವನ್ನು ಹರಿದು ಬಿಸಾಡಿರುವುದು ಪೀಠಕ್ಕೆ ಮಾಡಿದ ಅವಮಾನ. ಹಾಗಾಗಿ, ಅವರನ್ನು ಹೊರಗೆ ಹಾಕಬೇಕು.

**(ಗೊಂದಲ)**

**ಸಭಾಪತಿಯವರು (ಎದ್ದುನಿಂತು):–** ಒಂದು ನಿಮಿಷ ಎಲ್ಲರೂ ಕೇಳಿ. ಇವು ನಾವು ಮಾಡಿದಂತಹ ನಿಯಮಗಳು. ನಾವೇ ರಚನೆ ಮಾಡಿದಂತಹ ನಿಯಮಗಳು. ಈ ನಿಯಮಗಳ ಪುಸ್ತಕವನ್ನು ಹರಿದು ಹಾಕುವುದು ಸೂಕ್ತವಲ್ಲ. ದಯಮಾಡಿ ವಿರೋಧ ಪಕ್ಷದ ನಾಯಕರೇ, ಇದನ್ನು ಹರಿದು ಹಾಕುವುದು ಸರಿಯಲ್ಲ. ಇದನ್ನು ಹರಿದು ಹಾಕಬಾರದು. ಇದು ನಮಗೆ ಸಂವಿಧಾನ ಇದ್ದಂತೆ. ವಿರೋಧ ಪಕ್ಷದ ನಾಯಕರಾದ ತಾವು ಜವಾಬ್ದಾರಿ ಸ್ಥಾನದಲ್ಲಿ ಇರುವಂತಹವರು. ಇದನ್ನು ಮಾಡಬಾರದು. ಹಾಗಾಗಿ, ಇದರಲ್ಲಿ ತಾವು ಸ್ವಲ್ಪ ಎಡವಿದ್ದೀರಿ ಎಂದು ಭಾವಿಸುತ್ತೇನೆ. ದಯವಿಟ್ಟು ಬಿಡಿ, ಸಾಕು. ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡಿ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮಾನ್ಯ ಸಭಾನಾಯಕರ ಸ್ಥಾನದ ಬಳಿ ಗುಂಪುಗೂಡಿ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಅವರು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಮಾಡಬಹುದೇ? ದೊಡ್ಡಾಗಿ ಲಕ್ಚರ್ ಕೊಡುತ್ತಾರೆ. ಅವರಿಗೆ ಸಂವಿಧಾನದ ಬಗ್ಗೆ ಎಷ್ಟು ಗೌರವ ಇದೆ? ಅವರು ದೊಡ್ಡದಾಗಿ ಮಾತನಾಡುತ್ತಾರೆ. **(ಗೊಂದಲ)**

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡಿ. ಅವರು ಏನು ಹೇಳುತ್ತಾರೆ. ಅದನ್ನು ಕೇಳಿ.

**(ಗೊಂದಲ)**

**ಸಭಾಪತಿಯವರು (ಎದ್ದುನಿಂತು):–** ಒಂದು ನಿಮಿಷ. ನಾನು ಪೀಠದಿಂದ ಎದ್ದು ನಿಂತಾಗ ಗೌರವ ಕೊಡಿ. ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಬೆಳಗ್ಗೆಯಿಂದ ಹೇಳುತ್ತಿದ್ದೀರಿ. ಅವರು ಬಾವಿಯಿಂದ ಹೊರಗೆ ಬಂದರೆ? ಅವರು ಪೀಠಕ್ಕೆ ಗೌರವ ಕೊಡುವುದಿಲ್ಲ. ಅವರು ಇಲ್ಲಿ **ಗೂಂಡಾಗಿರಿ** ಮಾಡುತ್ತಾರೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರು ಮಾಡುವುದು ಸರಿ ಇದೆಯೇ?

**(ಗೊಂದಲ)**

**ಸಭಾಪತಿಯವರು (ಎದ್ದುನಿಂತು):-** ಒಂದು ನಿಮಿಷ. ಮಾನ್ಯ ಸಭಾನಾಯಕರೇ, ಎಲ್ಲರೂ ಒಂದು ನಿಮಿಷ ಕೇಳಿ. ನನಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ಗಲ್ಲಿಗೆ ಹಾಕುವಂತಹ ವ್ಯಕ್ತಿಯನ್ನು ಏನಾದರೂ ಮಾತನಾಡುವುದಿದ್ದರೆ ಹೇಳಿ ಎಂದು ಕೇಳುತ್ತಾರೆ. ಈಗ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಬೇಕು ಎಂದು ಹೇಳಿದ್ದಾರೆ. ಈಗ ಅವರನ್ನು ಹೇಳುವುದಕ್ಕೆ ಬಿಡಿ. ಅವರು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಮಾಡಿದ್ದು ಸರಿಯೇ? ನಮಗೆ ಯಾವ explanation ಬೇಡ.

**(ಗೊಂದಲ)**

**ಸಭಾಪತಿಯವರು (ಎದ್ದುನಿಂತು):-** ಒಂದು ನಿಮಿಷ. ಮಾನ್ಯ ಸದಸ್ಯರಾದ ನಾಗರಾಜುರವರೇ, ಅವರು ಹೇಳುತ್ತಾರೆ. ತಾವುಗಳು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ,..,

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಮಾಡಿದ ತಪ್ಪಿಗೆ ಕ್ಷಮೆ ಕೇಳಿದ್ದಾರೆಯೇ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಅವರು ಹೇಳುವುದನ್ನು ಕೇಳಿ. ನಾನು ಅವರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲಾ episode ಗೆ ಅವರೆ ಸಾಕ್ಷಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ ಎಲ್ಲದಕ್ಕೂ ಅವರೇ ಸಾಕ್ಷಿ. ಮಾನ್ಯ ರಾಜ್ಯಪಾಲರಿಗೂ ಅಪಮಾನ ಮಾಡಿದಾಗಲೂ ಅವರು ಇದ್ದರು. ಅವರು ಎಲ್ಲರೂ ಎಗರಾಡಲಿ.

**(ಗೊಂದಲ)**

**ಸಭಾಪತಿಯವರು:-** ಈಗ ಒಂದು ನಿಮಿಷ. ನಾನು ಹೇಳುತ್ತೇನೆ. ಅವರವರ ಜಾಗದಲ್ಲಿ ಕುಳಿತುಕೊಂಡು ಮಾತನಾಡಿದರೆ ಅದು record ಗೆ ಹೋಗುತ್ತದೆ. ಬಾವಿಯಲ್ಲಿ ಇದ್ದವರು ಮಾತನಾಡಿದ್ದು ಯಾವುದು record ಹೋಗಬಾರದು. ಅವರು ಯಾರು ಮಾತನಾಡಿದರೂ record ಹೋಗಬಾರದು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ಪುಸ್ತಕ ನಿಮ್ಮ ಕಡೆಗೂ ಇದೆ. ಮಾತನಾಡುವುದಕ್ಕೆ ಬಯಸುವಂತಹ ಸದಸ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡು ಮಾತನಾಡಿ.

**(ಮಾನ್ಯ ಸಭಾಪತಿಯವರ ಆದೇಶಾನುಸಾರೀ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಬೆಳಗ್ಗೆಯಿಂದ ಅವರಿಗೆ ಹೇಳಿದ್ದೀರಿ. ಮಾನ್ಯ ಉಪ ಸಭಾಪತಿಯವರು ಪ್ರಯತ್ನ ಮಾಡಿದರು. ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೀರಿ. **(ಗೊಂದಲ)** ಅವರಿಗೆ ಇದರ ಬಗ್ಗೆ ಏನಾದರೂ ಗೌರವ ಇದೆಯೇ? ಅವರು ಬಾಯಿಗೆ ಬಂದಂತೆ ಮಾತನಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆಯಿತು ಬಿಡಿ. ತಾವು ಸುಮ್ಮನಿರಿ. ತಾವು silent ಆಗಿ ಇರಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಎಲ್ಲಾ ಬುದ್ಧಿವಂತರು ಇದ್ದರು. ಅವರು ವಿಚಾರವಂತರು ಇದ್ದರು. ಅವರು ಲಾಯರ್‌ಗಳು ಇದ್ದರು. ತಿಳಿದುಕೊಳ್ಳಬೇಕಾಗಿತ್ತು. ಇಲ್ಲಿಗೆ ಬಂದು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಗೌರವ ಕೊಟ್ಟಿದ್ದಾರೆಯೇ ಎಂಬುದನ್ನು ಮೊದಲು ಹೇಳಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಬಸವನಗೌಡ ಬಾದರ್ಲಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರೇ, ತಾವು ಸುಮ್ಮನಿರಿ. ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆಂದು ಕೇಳೋಣ. ಅವರಿಗೆ ಹೇಳುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಇಲ್ಲಿ ಎಲ್ಲಾ ನಿಂತುಕೊಂಡು ಓದಿಸುತ್ತಾರೆಯೇ? ಇಲ್ಲಿ ಅದಕ್ಕೆ ಅವಕಾಶ ಇದೆಯೇ? ಅವರು ಆ ಜಾಗದಲ್ಲಿ ಕುಳಿತ್ತಿದ್ದವರು. ಆಗ ಎಲ್ಲಾ ಅವರು ಓದಿದ್ದಾರೆಯೇ? ಅವರು ಸುಮ್ಮನೆ ಮಾತನಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಎಲ್ಲರೂ ಸುಮ್ಮನಿರಿ. ಎಲ್ಲರೂ ತಮ್ಮ ತಮ್ಮ ಜಾಗದಲ್ಲಿ ಕುಳಿತುಕೊಳ್ಳಿ. ಇದು ಯಾವುದೂ ಕಡತಕ್ಕೆ ಹೋಗಬಾರದು.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡೆವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಒಂದು ನಿಮಿಷ. ಅವರಿಗೆ ಮಾತನಾಡುವುದಕ್ಕೆ ಬಿಡಿ. ಮಾನ್ಯ ಸರ್ಕಾರದ ಮುಖ್ಯ ಸಚೇತಕರೇ, ಇದು ಸರಿಯಲ್ಲ. ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡಬೇಕು. ಅವರನ್ನು ಹೇಳುವುದಕ್ಕೆ ಬಿಡಿ. ಅವರು ಏನು ಕೇಳುತ್ತಾರೋ, ಅದನ್ನು ಕೇಳಿ. ತಾವುಗಳು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ನಾನು ಅವರ ಒಪ್ಪಿಗೆಯನ್ನು ಹೇಳುವುದಕ್ಕೆ ಹೇಳಿದ್ದೇನೆ. ಹಾಗಾಗಿ, ಅವರಿಗೆ ಹೇಳುವುದಕ್ಕೆ ಬಿಡಿ. ತಾವುಗಳೆಲ್ಲರೂ ತಮ್ಮ ತಮ್ಮ ಜಾಗದಲ್ಲಿ ಕುಳಿತುಕೊಳ್ಳಿ. ಅವರನ್ನು ಕೇಳುವುದಕ್ಕೆ ಬಿಡಿ. ಅವರು ಕೇಳುತ್ತಾರೆ.

(ಮುಂದು)

(061) 28.01.2026/3.50/ಎಂವಿ-ಆರ್‌ಎನ್

**ಸಭಾಪತಿಯವರು:-** ಈಗ ಯಾರೂ ಮಾತನಾಡಬೇಡಿ, ಸುಮ್ಮನೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ದಯಮಾಡಿ ಸದನ...

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ಮಾತನಾಡುತ್ತಾರೆಯೋ ಅಥವಾ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆಯೋ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪ್ರಕಾರ ನಡೆದುಕೊಂಡಿದ್ದಾರೆಯೇ ಮತ್ತು ನಾವು ನಿನ್ನೆಯಿಂದ ಸಭಾನಾಯಕರು ಕ್ಷಮೆ ಕೇಳಬೇಕು ಎಂದು ಕೇಳಕೊಳ್ಳುತ್ತಿದ್ದೇವೆ. ಅದರ ಪ್ರಕಾರ ನಡೆದುಕೊಂಡಿಲ್ಲ ಎಂದ ಮೇಲೆ ಏಕೆ ರೂಲ್ ಬುಕ್ ಪ್ರಕಾರವೆಂದು ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಕ್ಷಮೆ ಕೇಳಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ನಿನ್ನೆಯಿಂದ ಸಭಾನಾಯಕರು ಕ್ಷಮೆ ಕೇಳಬೇಕು ಎಂದು ಹೇಳುತ್ತಿದ್ದೇವೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಇದರ ಬಗ್ಗೆ ಹೇಳಬಿಡಿ. ನೀವು ಇದನ್ನು ಸುಮ್ಮನೆ ಬೆಳೆಸುತ್ತಿದ್ದೀರಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಇದರಿಂದ ತಮ್ಮ ಪೀಠಕ್ಕೆ ಏನಾದರೂ ಅಪಮಾನ ಮಾಡಿದ್ದರೆ...

**(ಗೊಂದಲ)**

**ಸಭಾಪತಿಯವರು:–** ತಾವು ಇದರ ಬಗ್ಗೆ ಹೇಳಿ.

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ:–** ಮಾನ್ಯ ಸಭಾಪತಿಯವರೇ, ಏನಾದರೂ ಅಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ನಾನು ಪೀಠಕ್ಕೆ ಅಪಮಾನ ಮಾಡಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಬಿಡಿ ಮತ್ತು ಅವರು ಹೇಳುವುದನ್ನು ಕೇಳಿಸಿಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಪೀಠಕ್ಕೆ ಅಪಮಾನ ಮಾಡಿಲ್ಲ, ಸದನಕ್ಕೆ ಅಪಮಾನ ಮಾಡಿಲ್ಲ ಮತ್ತು ಸಂವಿಧಾನಕ್ಕೆ ಅಪಮಾನ ಮಾಡಿಲ್ಲ. ಆದರೆ, ಒಂದು ಸಮಯ ನೀವು ಏನಾದರೂ ಅದನ್ನು ಮಾಡಬಾರದಾಗಿತ್ತು ಎನ್ನುವುದಾದರೆ...

**(ಗೊಂದಲ)**

**ಸಭಾಪತಿಯವರು:–** ತಾವುಗಳು ಅವರು ಮಾತನಾಡುವುದಕ್ಕೆ ಬಿಡುತ್ತಿಲ್ಲ ನಾನು ಏನು ಮಾಡುವುದು. ಅವರು ಹೇಳುತ್ತಿದ್ದಾರೆ, ನೀವು ಅದನ್ನು ಕೇಳಿಸಿಕೊಳ್ಳಿ.

**(ಗೊಂದಲ)**

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಶ್ರೀನಿವಾಸ್‌ರವರೆ, ನಾನು ಹೇಳುವುದನ್ನು ಕೇಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬೇಕೆಂದು ಕೇಳಿದ್ದಾರೆ. ನಾನು ಅವರಿಗೆ ಅನುಮತಿ ಕೊಟ್ಟಿದ್ದೇನೆ. ತಾವು ಅವರ ಮಾತನ್ನು ಕೇಳಿ. ಆಮೇಲೆ ನೋಡೋಣ. ಈಗ ಅವರ ಮಾತುಗಳನ್ನು ಕೇಳಿ.

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಪೀಠಕ್ಕೆ ಅಷ್ಟೆ ವಿಷಾಧ ವ್ಯಕ್ತಪಡಿಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರುಗಳನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮಾನ್ಯ ಸಭಾನಾಯಕರು ಸ್ಥಾನದ ಬಳಿ ಗುಂಪು ಕಟ್ಟಿಕೊಂಡು ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳಿದ ಸಚಿವರಿಗೆ...

**(ಗೊಂದಲ)**

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ರೂಲ್ ಪ್ರಕಾರ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವಂತಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಸುಳ್ಳು ಹೇಳಿದ ಸಚಿವರಿಗೆ...

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ.

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳಿದ ಸಚಿವರನ್ನು ಹೊರಗೆ ಹಾಕಿ. ರಾಜ್ಯಪಾಲರಿಗೆ ಅವಮಾನ ಮಾಡಿದ ಗೂಂಡಾಗಳನ್ನು ಹೊರಗೆ ಹಾಕಿ

**(ಗೊಂದಲ)**

**ಸಭಾಪತಿಯವರು:-** ಅವರನ್ನು ಹೊರಗೆ ಹಾಕಿ. ಶ್ರೀ ಪ್ರತಾಪ್ ಸಿಂಹ ನಾಯಕ್‌ರವರೆ ತಾವು ಕುಳಿತುಕೊಳ್ಳಿ. ನಿಮಗೆ ಬುದ್ಧಿ ಇದೆಯೇ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಗೂಂಡಾಗಳನ್ನು ಹೊರಗೆ ಹಾಕಿ

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರೆ, ನಮ್ಮ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕವನ್ನು ತಾವು ಹರಿದು ಹಾಕಿದ್ದು ಸರಿಯಾದ ಕ್ರಮವಲ್ಲ. ತಾವು ದಯಮಾಡಿ ಅದರ ಸಲುವಾಗಿ ವಿಷಾದವನ್ನು ವ್ಯಕ್ತಪಡಿಸಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಅವರು ಕ್ಷಮೆ ಕೇಳಲಿ. ಮತ್ತೆ ಅವರಿಗೆ ಛೀಮಾರಿ ಹಾಕಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರಿಗೆ ಮೊದಲು ಛೀಮಾರಿ ಹಾಕಬೇಕು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ನಿನ್ನೆಯಿಂದ ಕೇಳುತ್ತಿದ್ದೇನೆ ಕ್ಷಮೆ ವ್ಯಕ್ತಪಡಿಸಿ ಎಂದು. ಅವರು ಕ್ಷಮೆ ಕೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ಅದು ಬೇಡ. ಇದನ್ನು ಅಷ್ಟೆ ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅದಕ್ಕೆ ಅವಕಾಶ ಕೊಡಲಿಲ್ಲ. ಅವರು ವಿಷಾದ ವ್ಯಕ್ತ ಮಾಡುವುದಿಲ್ಲವೇ? **(ಗೊಂದಲ)** ಮಾನ್ಯ ಸಭಾಪತಿಯವರೇ, ನಾನು ಅಪರಾಧದ ಕೆಲಸ ಮಾಡಿಲ್ಲ. ಆದರೂ ಕೂಡ....

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ 3 ಗಂಟೆ 55 ನಿಮಿಷಗಳಿಗೆ ಸದನವು 15 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(62) 28.01.2026 4.50 **ಹೆಚ್‌ವಿ.ಕೆಎಸ್**

**(ಅಪರಾಹ್ನ 15 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 54 ನಿಮಿಷಗಳಿಗೆ ಸಮಾವೇಶಗೊಂಡಿತು)**

**( ಸಭಾಪತಿಗಳಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಭಾ ಪೀಠವನ್ನು ಅಲಂಕರಿಸಿದರು)**

(ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮಾನ್ಯ ವಿರೋಧ ಪಕ್ಷದ ನಾಯಕರು) ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಸಿ.ಟಿ.ರವಿಯವರನ್ನು ಹೊರತುಪಡಿಸಿ ಉಳಿದ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗಿಳಿದು ಧರಣಿಯನ್ನು ಮುಂದುವರಿಸಿದರು)

(ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಸಭಾನಾಯಕರ ಪೀಠದ ಬಳಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)

**ಸಭಾಪತಿಯವರು:-** ಒಂದು ನಿಮಿಷ ಕೇಳಿ..

**ಶ್ರೀ ಎ. ವಸಂತಕುಮಾರ್(ವಿಧಾನಸಭಾ ಕ್ಷೇತ್ರ) (ಸಭಾನಾಯಕರ ಪೀಠದ ಬಳಿ ನಿಂತು):-** ಸನ್ಮಾನ್ಯ ಸಭಾಪತಿಯವರೇ, ಪೀಠಕ್ಕೆ ಅಗೌರವವನ್ನು ತೋರಿಸಿದ, ಪೀಠಕ್ಕೆ ಅಪಮಾನ ಮಾಡಿದ ವಿರೋಧ ಪಕ್ಷದ ನಾಯಕರನ್ನು ಸಸ್ಪೆಂಡ್ ಮಾಡಲೇಬೇಕು.

**(ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಸಭಾನಾಯಕರ ಪೀಠದ ಬಳಿ ನಿಂತು ಘೋಷಣೆ ಕೂಗುವುದನ್ನು ಮುಂದುವರಿಸಿದರು)**

**ಶ್ರೀ ಐವನ್ ಡಿ'ಸೋಜಾ(ಸಭಾನಾಯಕರ ಪೀಠದ ಬಳಿ ನಿಂತು):–** ಸನ್ಮಾನ್ಯ ಸಭಾಪತಿಯವರೇ, ಕಳೆದು ಮೂರು ದಿನಗಳಿಂದ ಅವರುಗಳು ಇದೇ ನಾಟಕವನ್ನು ಆಡುತ್ತಿದ್ದಾರೆ. ನಾವು ಸದನಕ್ಕೆ ಬರುವುದು, ಕುಳಿತುಕೊಳ್ಳುವುದು, ಹೋಗುವುದು ಇಷ್ಟೇ ನಡೆದಿದೆ. ಒಂದಕ್ಕೆ ಒಂದು ಲಿಂಕ್ ಮಾಡುತ್ತಲೇ ಇದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಅವರುಗಳು ಮಾತನಾಡುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಪುಸ್ತಕವನ್ನು ಹರಿದು ಹಾಕಿರುವುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎನ್.ನಾಗರಾಜು(ಸಭಾನಾಯಕರ ಪೀಠದ ಬಳಿ ನಿಂತು):–** ಸನ್ಮಾನ್ಯ ಸಭಾಪತಿಯವರೇ, ವಿಷಾದ ವ್ಯಕ್ತಪಡಿಸುವುದು ಬೇರೆ, ಕ್ಷಮೆ ಕೇಳುವುದು ಬೇರೆ.

**(ಗೊಂದಲ)**

**ಸಭಾಪತಿಯವರು:–** ಸರಿ ಕ್ಷಮೆ ಕೇಳುತ್ತಾರೆ.

**ಶ್ರೀ ಎ.ವಸಂತಕುಮಾರ್(ಸಭಾನಾಯಕರ ಪೀಠದ ಬಳಿ ನಿಂತು):–** ಸಂವಿಧಾನಕ್ಕೆ ಅವಮಾನ ಮಾಡಿರುವ ವಿರೋಧ ಪಕ್ಷದ ನಾಯಕರನ್ನು ಸಸ್ಪೆಂಡ್ ಮಾಡಬೇಕು.

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಸಸ್ಪೆಂಡ್ ಮಾಡಬೇಕೆಂದು ಅವರು ಕೇಳುತ್ತಿದ್ದಾರೆ. ಘನತೆವೆತ್ತ ರಾಜ್ಯಪಾಲರಿಗೆ ಅಪಮಾನ ಮಾಡಿದಂತಹ ಸದಸ್ಯರನ್ನು ಸಸ್ಪೆಂಡ್ ಮಾಡಬೇಕೆನ್ನುವುದು ನಮ್ಮ ಬೇಡಿಕೆಯಾಗಿದೆ. ದಯಮಾಡಿ ಮೊದಲು ಅವರನ್ನು ಸಸ್ಪೆಂಡ್ ಮಾಡಿ.

**(ಗೊಂದಲ)**

(ಮುಂದು)

(63) 28.1.2026 5.00 ಪಿಕೆ:ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ಎರಡೂ ಕಡೆ ಸಮಸ್ಯೆ ಇದೆ. ಮೊದಲನೇ ಕೇಸ್‌ಗೆ ಜಡ್ಜ್‌ಮೆಂಟ್ ಕೊಡಿ. ಇವರು ಸಂವಿಧಾನವನ್ನು ಅಪಮಾನ ಮಾಡಿದ್ದಾರೆ; ರಾಜ್ಯಪಾಲರನ್ನು, ಸಂವಿಧಾನದ ಪ್ರತಿನಿಧಿಯನ್ನು ಅಪಮಾನ ಮಾಡಿದ್ದಾರೆ. **(ಗೊಂದಲ)** ಆ ಅಪಮಾನ ಮಾಡಿದ್ದಕ್ಕೆ ಮೊದಲು ಜಡ್ಜ್‌ಮೆಂಟ್ ಕೊಡಿ. **(ಗೊಂದಲ)** ಅದು ನಿಯಮದ ಪ್ರಕಾರ ಇಲ್ಲ. ನಿಯಮದ ಪ್ರಕಾರ ಸಸ್ಪೆಂಡ್ ಮಾಡದೇ ಬೇರೆ ಆಪ್‌ಷನ್ ಇಲ್ಲ, ಅದಕ್ಕೆ ಸಂಬಂಧಪಟ್ಟಂತೆ ವಿವೇಚನೆಯ ಅಧಿಕಾರ ಇಲ್ಲ, ಮೊದಲು ಆ ಬೇಡಿಕೆಯನ್ನು ಈಡೇರಿಸಿ. ದಿನಾಂಕ 22ರಂದು ನಡೆದ ಘಟನೆಗೆ ಸಂಬಂಧಪಟ್ಟಂತೆ ಏನು ವಿಚಾರ ಇದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ತಪ್ಪು ಮಾಡಿದವರನ್ನು ಅಮಾನತ್ತು ಮಾಡಬೇಕು. ಮೊದಲನೆ ಕೇಸ್‌ನಲ್ಲಿ ತಪ್ಪು ಮಾಡಿದವರನ್ನು ಮೊದಲು ಸಸ್ಪೆಂಡ್ ಮಾಡಿ.

**(ಗೊಂದಲ)**

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 303ಅನ್ನು ನಾನು ಓದುತ್ತೇನೆ.

"(8) ಪರಿಷತ್ತಿನ ಕಾರ್ಯವಿಧಿಗೆ ತಡೆ ಅಥವಾ ವಿಘ್ನವನ್ನು ತರತಕ್ಕುದಲ್ಲ ಮತ್ತು ಸದನದಲ್ಲಿ ಭಾಷಣವಾಗುತ್ತಿರುವಾಗ ವೀಕ್ಷಕ ವಿವರಣೆಯನ್ನು ಮಾಡತಕ್ಕದ್ದಲ್ಲ"

"(11) ಸದನದಲ್ಲಿ ಘೋಷಣೆಯನ್ನು ಕೂಗತಕ್ಕದ್ದಲ್ಲ"

"(21) ಸದನದಲ್ಲಿ ಪ್ರತಿಭಟನೆ ಸೂಚಿಸಿ ಕಾಗದ ಪತ್ರಗಳನ್ನು ಹರಿದು ಹಾಕತಕ್ಕದ್ದಲ್ಲ."

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ಪೀಠಕ್ಕೆ ನನ್ನ ವಿನಂತಿ ಏನೆಂದರೆ, ನಿಯಮ ಏನು ಹೇಳುತ್ತದೆಯೋ ಆ ಪ್ರಕಾರ ನೀವು ಕ್ರಮ ಕೈಗೊಳ್ಳಿ. ರೂಲ್ ಪ್ರಕಾರ ಕ್ರಮ ಆಗಬೇಕೋ ಬೇಡವೋ? ಮಾನ್ಯ ಸಭಾಪತಿಗಳೆ, ನಮ್ಮ ಹತ್ತಿರ ಸಾಕ್ಷಿ ಇದೆ. ನಮ್ಮ ಹತ್ತಿರ ಫೋಟೋ ಮತ್ತು ವಿಡಿಯೋಗಳು ಲಭ್ಯವಿದೆ. ಅದನ್ನು ಸದನಕ್ಕೆ ಒದಗಿಸಿ ಕೊಡುತ್ತೇವೆ. ದಯವಿಟ್ಟು ರೂಲ್ ಪ್ರಕಾರ ಕ್ರಮ ಕೈಗೊಳ್ಳಿ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಸುಮ್ಮನಿರಿ. ಎರಡೂ ಕಡೆಯಿಂದ ತಪ್ಪಾಗಿದೆ. ಅದೇ ವಿಷಯಗಳನ್ನು ಎತ್ತೆತ್ತಿ ಮಾತನಾಡುವ ಬದಲು ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಪ್ರಶ್ನೋತ್ತರಗಳು ಬಾಕಿ ಇದೆ. ಸದನ ಇನ್ನೂ 3 ದಿನ ನಡೆಯುವುದಷ್ಟೇ ಬಾಕಿ ಇದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, ನಿಯಮ ಮಾಡಿರುವುದು ಪಾಲಿಸುವುದಕ್ಕೆಯೇ ಹೊರತು ಉಲ್ಲಂಘನೆ ಮಾಡುವುದಕ್ಕಲ್ಲ.

**ಸಭಾಪತಿಯವರು:–** ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೋ ಕೇಳೋಣ . .

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಗಳೆ, 22ನೇ ತಾರೀಖಿನಿಂದ ಪೀಠದ ಮುಂದೆ ಕೇಸ್ ಪೆಂಡಿಂಗ್ ಇದೆ. ನಮ್ಮ ನಿಯಮಗಳ ಪ್ರಕಾರ ಇದರಲ್ಲಿ ವಿವೇಚನಾ ಅಧಿಕಾರ ಎನ್ನುವುದಿಲ್ಲ. ನಮ್ಮ ನಿಯಮಗಳು, ರಾಜ್ಯಪಾಲರನ್ನು ಅಪಮಾನಗೊಳಿಸಿದರೆ ಅಂಥವರನ್ನು ಸಸ್ಪೆಂಡ್ ಮಾಡಬೇಕು ಎಂದು ಹೇಳುತ್ತದೆ. ಈ ವಿವೇಚನಾ ಅಧಿಕಾರಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅದಕ್ಕೆ ನಾನು ಪೀಠಕ್ಕೆ ವಿನಂತಿ ಮಾಡುತ್ತೇನೆ. ಯಾರು ನಿಯಮಗಳನ್ನು ಉಲ್ಲಂಘಿಸಿದ್ದಾರೋ ಅಂಥವರನ್ನು ಸಸ್ಪೆಂಡ್ ಮಾಡಿ. ನೀವು ಸಸ್ಪೆಂಡ್ ಮಾಡಿ. 22ನೇ ತಾರೀಖಿನ ಕೇಸ್ ಇನ್ನೂ ಪೆಂಡಿಂಗ್ ಇದೆ. ಅದಕ್ಕೆ ತೀರ್ಪು ಕೊಡಿ.

**ಸಭಾಪತಿಯವರು:–** ಅವರಿಗೆ ಹೇಳುವುದಕ್ಕಾದರೂ ಬಿಡುತ್ತೀರೋ ಇಲ್ಲವೋ?

**(ಗೊಂದಲ)**

**ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 11.00ವರೆಗೆ ಮುಂದೂಡಲಾಗಿದೆ.

**(ಸಂಜೆ 5 ಗಂಟೆ 10 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ದಿನಾಂಕ 29ನೇ ಜನವರಿ 2026ರಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

**“[xxx] ಈ ಚಿಹ್ನೆಯು ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾದ ಪದಗಳು ಎಂಬುದನ್ನು ಗುರುತಿಸುತ್ತದೆ.”**